**ಜ್ಯೋತಿಕಾರ್ಯದ ವಾರ್ತಾಪತ್ರ**



**ಮಹರ್ಷಿ ಅಮರ (1919-1982)**

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 16 ಸಂಚಿಕೆ 10 ಅಕ್ಟೋಬರ್ 2019 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಡಿಸೆಂಬರ್ 1991ರ ಸಂಚಿಕೆ)**

ಎರಡು ವರ್ಷಗಳ ಹಿಂದೆ ಒಬ್ಬ ಸಾಧಕರು ನನಗೆ ಒಂದು ಪತ್ರ ಬರೆದರು. ಅದು ನಾವು ಏರ್ಪಡಿಸಿದ್ದ ಸಮ್ಮೇಳನದ ನಂತರ ಬರೆದುದಾಗಿತ್ತು. ಅವರು ಅಂತಹ ಸಮ್ಮೇಳನಗಳ ನಿರರ್ಥಕತೆಯ ಬಗ್ಗೆ ಮಾತನಾಡುತ್ತಿದ್ದರು, ಅವು ಜನರನ್ನು ಧ್ಯಾನಿಗಳನ್ನಾಗಿ ಮಾಡುವುದಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಇತ್ತೀಚೆಗೆ ನಾನು ಆ ಪತ್ರವನ್ನು ಓದಿದೆ, ಅವರ ಅಭಿಪ್ರಾಯ ಎಷ್ಟು ನಿಜ ಎನಿಸಿತು. ಸಮ್ಮೇಳನಗಳು, ವಿಚಾರಗೋಷ್ಠಿಗಳು, ಬರಹಗಳು ಮುಂತಾದವುಗಳಿಂದ ಪ್ರಚಾರವೇನೋ ಆಗುತ್ತದೆ, ಆದರೆ ಅವು ಸುಲಭವಾಗಿ ಜನರನ್ನು ಧ್ಯಾನ ಮಾರ್ಗಕ್ಕೆ ತರುವುದಿಲ್ಲ. ಹಾಗಾದರೆ ಮತ್ತೇನು ತರುತ್ತದೆ?

ಜನರು ಯೋಗಾಸನ ಮತ್ತು ಆರೋಗ್ಯ ಶಿಬಿರಗಳಿಗೆ ಆಕರ್ಷಿತರಾದಂತೆ ಧ್ಯಾನಗಳಿಗೆ ಸುಲಭವಾಗಿ ಆಕರ್ಷಿತರಾಗುವುದಿಲ್ಲ. ಇದನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಲು ಸಾಧ್ಯವಿಲ್ಲ. ಯಾರೇ ಆದರೂ ಸಮಾಧಿ ಸ್ಥಿತಿಯನ್ನು ಹೇಗೆ ಮಾಡಿ ತೋರಿಸುವುದು? ಆಸ್ತಮಾ 21 ದಿನದಲ್ಲಿ ಗುಣವಾಗುತ್ತದೆ ಎಂಬಂತಹ ಶೀಘ್ರ ಫಲಿತಾಂಶಗಳು ಇಲ್ಲಿಲ್ಲ! ಪವಾಡಗಳಿಲ್ಲ. ಒಂದು ವರ್ಷ ಧ್ಯಾನ ಮಾಡಿದ ನಂತರವೂ ನಮಗೆ ಒಂದು ಸಣ್ಣ ವಸ್ತುವನ್ನೂ ಪ್ರತ್ಯಕ್ಷಗೊಳಿಸಲು ಸಾಧ್ಯವಾಗುವುದಿಲ್ಲ! ಅಂದ ಮೇಲೆ ಜನರನ್ನು ಧ್ಯಾನಕ್ಕೆ ಹೇಗೆ ಕರೆತರುವುದು?

ಧ್ಯಾನಗಳು ಶಾಂತಿ ಮತ್ತು ಪರಿಪೂರ್ಣತೆಯನ್ನು ಹಾಗೂ ಪುಸ್ತಕಗಳು ಮತ್ತು ಬುದ್ಧಿಶಕ್ತಿಯಿಂದ ದೊರೆಯಲಾರದಂತಹ ಅಪಾರ ಜ್ಞಾನವನ್ನು ತರುತ್ತವೆ. ಧ್ಯಾನಗಳು ನಮ್ಮನ್ನು ಸತ್ಯಕ್ಕೆ ಹತ್ತಿರವಾಗಿಸುತ್ತವೆ. ಇದರಿಂದ ಈ ಜೀವನದ ಉದ್ದೇಶ ಮತ್ತು ಸಮಾಪ್ತಿ ಎರಡೂ ಸ್ಪಷ್ಟವಾಗುತ್ತವೆ. ಅಂತರಂಗದ ಶಾಂತಿ ಮತ್ತು ಸತ್ಯವನ್ನು ಅರಿಯುವುದಕ್ಕಿಂತ ಹೆಚ್ಚಿನ ಸಾಧನೆ ಏನಿದೆ? ಈ ವಿಷಯಗಳನ್ನು ಸ್ಪಷ್ಟ ಪಡಿಸಿದರೆ ಮತ್ತು ಧ್ಯಾನದ ಶ್ರೇಷ್ಠತೆಯನ್ನು ಪ್ರಚುರಪಡಿಸಿದರೆ ಜನರು ಈ ಮಾರ್ಗಕ್ಕೆ ಬರುತ್ತಾರೆ. ಆದರೆ ಪ್ರಚಾರ ಮಾಡುವುದು ಹೇಗೆ? ಇದನ್ನು ಯಾರಾದರೂ ನನಗೆ ಕಲಿಸಿದರೆ ಒಳ್ಳೆಯದಿತ್ತು.

ಆ ಪತ್ರದಲ್ಲಿ ಮತ್ತೊಂದು ವಿಷಯವಿದೆ. ನಮ್ಮಲ್ಲಿ ಹಲವಾರು ಯೋಜನೆಗಳಿವೆ, ಎಲ್ಲವೂ ಅಸಾಧಾರಣ, ಅದ್ಭುತ. ಒಂದಲ್ಲ ಒಂದು ದಿನ ನಾವು ಇವುಗಳನ್ನು ಆರಂಭಿಸಲೇಬೇಕು. ಆದರೆ ಸಾಧನೆ ಮಾಡುತ್ತಿರುವ ನಮ್ಮ ಈಗಿನ ಸಾಧಕರ ಬಳಿ ಈ ವಿಷಯವಾಗಿ ಮಾತನಾಡಿದರೆ, ಅವರು, ಇವೆಲ್ಲ ಕನಸಿನ ರೂಪದವು ಮತ್ತು ಕಾರ್ಯಸಾಧ್ಯವಲ್ಲದವು ಎನ್ನುತ್ತಾರೆ! ಇದೆಷ್ಟು ಸತ್ಯ! ಇದನ್ನು ಅರ್ಥಮಾಡಿಕೊಳ್ಳಲು ನಾನು ಪ್ರಯತ್ನಿಸಿ ನೋಡಬೇಕಾಯಿತು! ಅಮರರವರು ಸ್ವರ್ಗದಿಂದ ನೋಡಿ ನಗುತ್ತಿರಬೇಕು! ಅವರು ಎಂದೂ ಅವಸರಿಸಲಿಲ್ಲ, ಎಡವಲಿಲ್ಲ, ತಾಳ್ಮೆಯಿಂದ ಕಾದರು.

1991 ನನಗೆ ಅನೇಕ ವಿಷಯಗಳನ್ನು ಕಲಿಸಿತು. ಮತ್ತಾವ ವರ್ಷವೂ ಇಷ್ಟೊಂದು ತಿಳಿಯಪಡಿಸಿಲ್ಲ ಮತ್ತು ಇಷ್ಟೊಂದನ್ನು ಕೊಟ್ಟಿಲ್ಲ. ನನಗೆ ಋಷಿಗಳಿಂದ ಬಹಳಷ್ಟು ಜ್ಞಾನ ಬಂದಿದೆ, ಅದು ಅನೇಕ ಅಪರಿಚಿತ ವಿಷಯಗಳನ್ನು ಅರ್ಥಮಾಡಿಕೊಳ್ಳಲು ನೆರವಾಯಿತು. ಇದರಿಂದ ಸಾಧನೆಯನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು ಹಾಗೂ ಅನೇಕ ಹಿರಿಯ ಸಾಧಕರಿಗೆ ನೆರವಾಗಲು ಸಾಧ್ಯವಾಯಿತು. ನನ್ನಲ್ಲಿರುವ ಕಹಿ ಭಾವ ಮತ್ತು ಇನ್ನೂ ಅನೇಕ ನಕಾರಾತ್ಮಕ ವಿಷಯಗಳನ್ನು ಗೆಲ್ಲಲು ಸಾಧ್ಯವಾಯಿತು. ನನ್ನ ಸುತ್ತಲೂ ಭಗವಂತನನ್ನು ಹೆಚ್ಚು ಹೆಚ್ಚಾಗಿ ಕಾಣಲು ಸಾಧ್ಯವಾಯಿತು. ನನಗೆ ನನ್ನ ಪಯಣದ ಬಗ್ಗೆ ತೃಪ್ತಿಯಿದೆ ಹಾಗೂ ನಾನು 1991ಕ್ಕೆ ಕೃತಜ್ಞ, ನಾನು ಅವನಿಗೆ, ಆ 1991ಕ್ಕೆ ಕೃತಜ್ಞ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶನಿವಾರ** (ಬೆಳಿಗ್ಗೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

(ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**ತಪೋನಗರ ನಿವಾಸಿಗಳ ಕೂಟದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು**

### ಸುದ್ಧಿ-ಸೂಚನೆಗಳು

- ಹತ್ತಿರದ ಎಂಜಿನಿಯರಿಂಗ್ ಕಾಲೇಜಿನ ಸುಮಾರು 75 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಧ್ಯಾನವನ್ನು ಕಲಿಯುವುದಕ್ಕಾಗಿ ತಪೋನಗರಕ್ಕೆ ಭೇಟಿಕೊಟ್ಟರು. ಅವರು ನಮ್ಮ ಧ್ಯಾನ ಮಂದಿರದಲ್ಲಿ ಸೇರಿ, ನಮ್ಮ ಕಾರ್ಯಕರ್ತರು ನಡೆಸಿಕೊಟ್ಟ ವಿಶೇಷ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.
- ಸೆಪ್ಟೆಂಬರ್ 8ರಂದು, ಶಂಬಲ ಮಾಸ್ಟರ್‌ಗಳಿಂದ ದೀಕ್ಷೆ ಪಡೆಯಲು ಶಂಬಲ ಗುಂಪಿನ ಧ್ಯಾನಿಗಳು ಧ್ಯಾನ ಸಭಾಂಗಣದಲ್ಲಿ ಸೇರಿದ್ದರು. ಇನ್ನೂ ಅನೇಕ ಜನರು ಶಂಬಲ ಮಾಸ್ಟರ್‌ಗಳಿಂದ ದೀಕ್ಷೆ ಪಡೆಯಲು ನೇರ ವೆಬ್ ಕಾಸ್ಟ್ ಮೂಲಕ ಅಥವ ಮಾನಸಿಕವಾಗಿ ಸಂಪರ್ಕಗೊಂಡು ಧ್ಯಾನಮಾಡಿ ಭಾಗ ವಹಿಸಿದರು.
- 'ರಾ' ವಿಶೇಷ ಚೈತನ್ಯಗಳನ್ನು ಪಡೆಯಲು, ರಾ ಗ್ರೂಪ್‌ನ ಧ್ಯಾನಿಗಳು 15-09-2019 ರಂದು ತಪೋನಗರದ ಧ್ಯಾನ ಮಂದಿರದಲ್ಲಿ ಸೇರಿದ್ದರು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಶನಿ | ಸರಸ್ವತಿ ದೇವಿ ಪೂಜೆ |
| 06 | ಭಾನು | ದುರ್ಗಾಷ್ಟಮಿ |
| 07 | ಸೋಮ | ಮಹಾನವಮಿ |
| | | ಆಯುಧ ಪೂಜಾ |
| 08 | ಮಂಗಳ | ವಿಜಯ ದಶಮಿ |
| 13 | ಭಾನು | ಪೂರ್ಣಿಮೆ |
| 21 | ಸೋಮ | ಕೃಷ್ಣ ಅಷ್ಟಮಿ |
| 26 | ಶನಿ | ಮಾಸ ಶಿವರಾತ್ರಿ |
| 27 | ಭಾನು | ನರಕ ಚತುರ್ದಶಿ |
| | | ಮಹಾಲಕ್ಷ್ಮೀ ಪೂಜೆ |
| 28 | ಸೋಮ | ಅಮಾವಾಸ್ಯೆ |
| 29 | ಮಂಗಳ | ದೀಪಾವಳಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11 ರಿಂದ 12<br>ಲೈಟ್ ಚಾನಲಿಂಗ್: ಮಧ್ಯಾಹ್ನ 12 ರಿಂದ 1 |
| 13-10-2019 | ಮಧ್ಯಾಹ್ನ 2ಕ್ಕೆ ಲೈಟ್ ಚಾನಲ್ ಕಾರ್ಯಕರ್ತರು ಸಂಧಿಸುತ್ತಾರೆ |

### ನವರಾತ್ರಿಯ ವಿಶೇಷ ಧ್ಯಾನದ ತಂತ್ರ

ಸೆಪ್ಟೆಂಬರ್ 29ರಂದು ಪ್ರಾರಂಭವಾಗುವ ನವರಾತ್ರಿಯ ಸಮಯದಲ್ಲಿ ನಮ್ಮೆಲ್ಲರಿಗೂ ದೇವಿ ಆದಿ ಶಕ್ತಿಯ ಇರುವಿಕೆಯ ಅನುಗ್ರಹವಿದೆ. ನಾವು ಹೆಚ್ಚು ಧ್ಯಾನ ಮಾಡಿ ದೇವಿಯ ಚೈತನ್ಯಗಳನ್ನು ಪಡೆಯಬಹುದು. ಜೊತೆಗೆ ನಾವು ಆಕೆಯ ಇರುವಿಕೆಯ ಅರಿವಿನಲ್ಲೂ ಇರಬಹುದು. ನಾವು ನವರಾತ್ರಿಯಿಂದ ಪ್ರಾರಂಭಗೊಂಡು 10 ದಿನಗಳವರೆಗೆ ಈ ವಿಶೇಷ ತಂತ್ರವನ್ನು ಬಳಸಿಕೊಂಡು ಧ್ಯಾನ ಮಾಡಬಹುದು - ಒಂದು ದೊಡ್ಡ ನೀಲಿಬಣ್ಣದ ಬೆಳಕಿನ ಗೋಳದ ಬಗ್ಗೆ ಯೋಚಿಸಿ. ಈ ಗೋಳವನ್ನು ಪ್ರವೇಶಿಸಿ. ಈ ಬೆಳಕಿನ ಗೋಳವನ್ನು ಅನುಭವಿಸಿ, ಆದಿ ಶಕ್ತಿಯ ಚೈತನ್ಯಗಳನ್ನು ಅನುಭವಿಸಿ. ಯಾವುದೇ ಮಂತ್ರವನ್ನು ಪುನರುಚ್ಚರಿಸಬೇಕಾಗಿಲ್ಲ. ಈ ತಂತ್ರವನ್ನು ಹತ್ತು ದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಿ.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ**

ಬೆಳಕೇ ಜೀವನ ಮತ್ತು ಬೆಳಕೇ ನನ್ನ ಜೀವನದಲ್ಲಿ ಎಲ್ಲವೂ ಆಗಿದೆ. ಬೆಳಕು ನನ್ನೊಳಗೆ ಪ್ರವೇಶಿಸುತ್ತಿದ್ದಂತೆ, ನನ್ನಲ್ಲಿ ಚೈತನ್ಯಗಳು ಸಂಪೂರ್ಣವಾಗಿ ಉತ್ತೇಜನವಾದಂತೆನಿಸುತ್ತದೆ. ಅದು ನನ್ನನ್ನು ದಿನ ಪೂರ್ತಿ ಚಟುವಟಿಕೆಯಿಂದ ಮತ್ತು ಜಾಗೃತಿಯಿಂದಿರುವಂತೆ ಮಾಡುತ್ತದೆ, ಬೇರೆಯವರನ್ನೂ ಸ್ಫೂರ್ತಿಗೊಳಿಸಲು ಮತ್ತು ಪ್ರೋತ್ಸಾಹಿಸಲು ನನಗೆ ಸಹಾಯ ಮಾಡುತ್ತದೆ. ಈ ಬದುಕಿನ ಬೆಳಕಿಗೆ ಧನ್ಯವಾದಗಳು.

**–ಶ್ರೀಮತಿ. ಮೀನ ಮೋಹನ್, ಮುಖ್ಯೋಪಾಧ್ಯಾಯಿನಿ, ದಿ ನ್ಯೂ ಕೇಂಬ್ರಿಡ್ಜ್ ಇಂಗ್ಲೀಷ್ ಶಾಲೆ–ಐಸಿಎಸ್‌ಇ, ವಿಜಯನಗರ, ಬೆಂಗಳೂರು**

ಮಕ್ಕಳು ದಿನಾ ಬೆಳಗ್ಗೆ ತಪ್ಪದೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದಾರೆ ಮತ್ತು ಇದರಿಂದಾಗಿ ಅವರು ಶಾಂತವಾಗಿರುತ್ತಾರೆ ಮತ್ತು ಹೆಚ್ಚು ಸಕಾರಾತ್ಮಕರಾಗಿದ್ದಾರೆ. ಅವರಿಗೆ ಪಾಠದ ಕಡೆ ಗಮನ ಹರಿಸಲು ಸಾಧ್ಯವಾಗುತ್ತಿದೆ ಮತ್ತು ಓದುವುದರಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ. ಅವರ ಜ್ಞಾನವೂ ವೃದ್ಧಿಯಾಗುತ್ತಿದೆ. ಮಕ್ಕಳಲ್ಲಿ ಆಧ್ಯಾತ್ಮಿಕ ಮನೋಭಾವ, ಶಿಸ್ತು, ತಾಳ್ಮೆ ಮತ್ತು ಸಮಯದ ಪ್ರಜ್ಞೆ ಅಭಿವೃದ್ಧಿಸುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ನಮ್ಮ ಮಕ್ಕಳಲ್ಲಿ ಶಿಸ್ತು ಮತ್ತು ಸಮಯದ ಪ್ರಜ್ಞೆಯನ್ನು ಅಳವಡಿಸಲು ನಮಗೆ ಸಾಧ್ಯವಾಗಿದೆ. ನಮಗೆ ಲೈಟ್ ಚಾನಲಿಂಗ್ ಪರಿಚಯಿಸಿದ್ದಕ್ಕಾಗಿ ತುಂಬು ಹೃದಯದಿಂದ ಮಾನಸ ಫೌಂಡೇಶನ್‌ಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**–ಶ್ರೀ ಅಂಜಪ್ಪ, ಮುಖ್ಯೋಪಾಧ್ಯಾಯರು, ಪ್ರೇಮ ಕನ್ನಡ ಹೈಯರ್ ಪ್ರೈಮರಿ ಶಾಲೆ, ಯಲಹಂಕ, ಬೆಂಗಳೂರು**

ಲೈಟ್ ಚಾನಲಿಂಗ್ ಅಭ್ಯಾಸ ಮಾಡುವುದರಿಂದ ನಮ್ಮ ಮಕ್ಕಳು ಹಾಗೂ ಶಿಕ್ಷಕರು ಇಬ್ಬರಲ್ಲೂ ಪರಿವರ್ತನೆಯಾಗಿದೆ. ಮನಸ್ಸು ಅಲೆದಾಡುವುದು ಮಕ್ಕಳಲ್ಲಿ ಕಡಿಮೆಯಾಗಿದೆ ಮತ್ತು ಅವರ ಏಕಾಗ್ರತೆ ಉತ್ತಮಗೊಂಡಿದೆ. ಅವರಲ್ಲಿ ಸಕಾರಾತ್ಮಕ ಚೈತನ್ಯಗಳು ತುಂಬಿವೆ.

**–ಮುಖ್ಯೋಪಾಧ್ಯಾಯರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಬಾಗಲಗುಂಟೆ, ಉತ್ತರ ಬೆಂಗಳೂರು**

ಲೈಟ್ ಚಾನೆಲಿಂಗ್ ನನಗೆ ಅದ್ಭುತವಾದ ಅನುಭವವನ್ನು ಕೊಟ್ಟಿದೆ. ನನ್ನನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಇದು ನನ್ನ ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿದೆ ಮತ್ತು ನನ್ನ ಆಲೋಚನೆಗಳು ಈಗ ಸಕಾರಾತ್ಮಕವಾಗಿವೆ.

**–ಶ್ರೀ ಮಲ್ಲಿಕಾರ್ಜುನ ಎಮ್, ಪ್ರಾಂಶುಪಾಲರು, ಲಾಲ್ ಬಹದೂರ್ ಶಾಸ್ತ್ರಿ ಶಾಲೆ, ರಾಂಪುರ, ಬೆಂಗಳೂರು**

ನನ್ನ ಕೈಬರಹ ತುಂಬಾ ಕೆಟ್ಟದಾಗಿತ್ತು. ನಾನು ಲೈಟ್ ಚಾನೆಲ್ ಮಾಡುವಾಗ ನನ್ನ ಕೈಬರಹಕ್ಕೂ ಬೆಳಕನ್ನು ಕಳುಹಿಸುತ್ತಿದ್ದೆ. ಈಗ ಅದು ಉತ್ತಮವಾಗಿದೆ ಮತ್ತು ನಾನು ಯಾವಾಗಲೂ ಉಲ್ಲಾಸದಿಂದಿರುತ್ತೇನೆ.

**–ಶ್ರುತಿ, ವಿದ್ಯಾರ್ಥಿನಿ, ಚಿಕ್ಕಬಿದ್ರಿ, ಪ್ರೌಢ ಪ್ರಾಥಮಿಕ ಶಾಲೆ, ಬೆಂಗಳೂರು**

ಲೈಟ್ ಚಾನಲಿಂಗ್ ಅತಿ ಸುಲಭವಾದ ಮತ್ತು ಪರಿಣಾಮಕಾರಿಯಾದ ವಿಧಾನ. ನಾನು ಅದನ್ನು ಪ್ರತಿದಿನಾ ಅಭ್ಯಾಸ ಮಾಡುತ್ತೇನೆ. ಅದು ಪ್ರತಿದಿನ ನಾನು ಆರೋಗ್ಯದಿಂದ ಮತ್ತು ಉಲ್ಲಾಸದಿಂದಿರಲು ಸಹಾಯ ಮಾಡುತ್ತದೆ, ಒತ್ತಡ, ಉದ್ವೇಗ ಮತ್ತು ಕೋಪವನ್ನು ಕಡಿಮೆ ಮಾಡುತ್ತದೆ. ನನ್ನ ಜ್ಞಾಪಕ ಶಕ್ತಿ ಉತ್ತಮಗೊಂಡಿದೆ ಮತ್ತು ನಾನು ವಿಷಯಗಳನ್ನು ಅಥವಾ ಪಾಠಗಳನ್ನು ಬಹುಕಾಲ ನೆನೆಪಿನಲ್ಲಿಡಬಲ್ಲೆ. ತರಗತಿಯಲ್ಲಿ ಏಕಾಗ್ರತೆಯಿಂದಿರುತ್ತೇನೆ ಹಾಗೂ ಪಾಠದ ಸಮಯದಲ್ಲಿ ಬೇರೆಲ್ಲೂ ಗಮನ ಹೋಗುವುದಿಲ್ಲ. ಇದನ್ನು ನನ್ನ ಗೆಳೆಯರಿಗೆ ಮತ್ತು ಕುಟುಂಬದ ಸದಸ್ಯರಿಗೆ ಶಿಫಾರಸು ಮಾಡುತ್ತೇನೆ.

**–ಗಗನ ಸಿಂಧು ಜಿ. ಎಮ್, 10ನೇ ತರಗತಿ, ಲಾಲ್ ಬಹದೂರ್ ಶಾಸ್ತ್ರಿ ಶಾಲೆ, ರಾಂಪುರ, ಬೆಂಗಳೂರು**

ಬೆಳಿಗ್ಗೆ ಮತ್ತು ಸಂಜೆ ಲೈಟ್ ಚಾನೆಲ್ ಮಾಡಿದಾಗ ನಾನು ಉಲ್ಲಾಸದಿಂದಿರುತ್ತೇನೆ. ನನ್ನ ಮನಸ್ಸು ಪ್ರಶಾಂತವಾಗುತ್ತದೆ. ಶಿಕ್ಷಕರು ಪಾಠ ಮಾಡುವಾಗ ನಾನು ಏಕಾಗ್ರತೆಯಿಂದ ಕೇಳಿಸಿಕೊಳ್ಳುತ್ತೇನೆ.

**–ಸದಿಯಾ, 10ನೇ ತರಗತಿ, ಲಾಲ್ ಬಹದೂರ್ ಶಾಸ್ತ್ರಿ ಶಾಲೆ, ರಾಂಪುರ, ಬೆಂಗಳೂರು**

ಇವತ್ತು ಲೈಟ್ ಚಾನಲಿಂಗ್ ಮಾಡಲು ಕಣ್ಣು ಮುಚ್ಚಿದಾಗ ನನಗೆ ಅತ್ಯಂತ ಶಾಂತತೆಯ ಮತ್ತು ಹಗುರತೆಯ ಅನುಭವವಾಯಿತು. ನನ್ನ ಮನಸ್ಸಿನಲ್ಲಿ ಪ್ರೀತಿ, ಶಾಂತಿ ಮತ್ತು ಸಂತೋಷ ತುಂಬಿತ್ತು. ಎಲ್ಲ ನಕಾರಾತ್ಮಕ ಯೋಚನೆಗಳಿಂದ ನನ್ನ ಮನಸ್ಸು ಮುಕ್ತವಾಯಿತು. ನಾನು ಈಗ ತುಂಬಾ ಉತ್ಸಾಹದಿಂದ ಇದ್ದೇನೆ.

**–ಮಿಸ್. ಛಾಯ ಸಾಹು, ಪ್ರಥಮ್ ಫೌಂಡೇಶನ್, ಪೂನ.**

ನಾನು ಪ್ರತಿ ದಿವಸ ಬೆಳಿಗ್ಗೆ ಮತ್ತು ಸಾಯಂಕಾಲ ಲೈಟ್ ಚಾನೆಲ್ ಮಾಡುತ್ತೇನೆ. ನನ್ನ ಪತಿಗೆ ಕೂಡ ಲೈಟ್ ಚಾನೆಲ್ ಮಾಡಲು ಹೇಳಿದ್ದೇನೆ. ನನ್ನ ಮನಸ್ಸು ಮತ್ತು ದೇಹ ಅತ್ಯಂತ ಪ್ರಶಾಂತವಾಗಿದೆ. ನನಗೆ ಹಗುರತೆಯ ಮತ್ತು ಉತ್ತಮ ಆರೋಗ್ಯದ ಅನುಭವವಾಗುತ್ತದೆ. ನಮ್ಮ ಮನೆಯಲ್ಲಿ ತುಂಬಾ ಶಾಂತಿ ನೆಲಸಿದೆ.

**–ಶ್ರೀಮತಿ ವಾಘ್, ಪ್ರಥಮ್ ಫೌಂಡೇಶನ್, ಪೂನ**

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**
**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಜನವರಿ 2006 (ಮುಂದುವರೆದದ್ದು)

ಅನೇಕ ವಿಷಯಗಳನ್ನು ನಾವು ಋಷಿಗಳಿಂದ ಕಲಿಯುತ್ತೇವೆ. ಎಲ್ಲವನ್ನೂ ನಾವು ಋಷಿಗಳಿಂದ ಕಲಿಯುತ್ತೇವೆ. ಕೆಲವೊಮ್ಮೆ ಅಸಾಮಾನ್ಯ ರೀತಿಯಲ್ಲಿ ಅವರು ನಮಗೆ ವಿಷಯಗಳನ್ನು ಕಲಿಸುತ್ತಾರೆ. ಇಂದು ಬೆಳಿಗ್ಗೆ, ಶೂನ್ಯ ಮಾಸದ ಅವಧಿಯಲ್ಲಿ ಇಲ್ಲಿದ್ದ ಮಹಾನ್ ಋಷಿಗೆ ಕೆಲವು ವಿಷಯಗಳನ್ನು ವಿವರಿಸಲು ಪ್ರಯತ್ನಿಸುತ್ತಿದ್ದೆ ಹಾಗೂ ನನಗೆ ಕೆಲವು ಸ್ಪಷ್ಟೀಕರಣಗಳೂ ಬೇಕಾಗಿತ್ತು. ನಾನು ಕೆಲವೊಮ್ಮೆ ಹೀಗೆ ಮಾಡುತ್ತೇನೆ. ಕೆಲವು ವಿಷಯಗಳನ್ನು ವರದಿ ಮಾಡುವಾಗ ನಾನು ಕೇಳಿದೆ, "ನಾನೇನಾದರೂ ತಪ್ಪು ಮಾಡಿದ್ದರೆ ದಯವಿಟ್ಟು ತಿಳಿಸಿ." ನಂತರ, ನನಗೆ ತ್ರಿಮೂರ್ತಿಗಳ ದರ್ಶನವಾಯಿತು. ಒಂದೇ ಮುಖದಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಮುಖಗಳನ್ನು ಕಂಡೆ. ಋಷಿ ಹೇಳಿದರು, "ನಾವಿರುವುದು ಇದೇ ರೀತಿ. ಋಷಿಗಳಾದ ನಾವು ಪರಿಪೂರ್ಣ ಮಾಸ್ಟರ್‌ಗಳೆಂದು ಹೇಳಿಕೊಳ್ಳುತ್ತೇವೆ. ಸೃಷ್ಟಿಯ ಶಕ್ತಿಗಳು, ಪೋಷಣೆಯ ಶಕ್ತಿಗಳು ಮತ್ತು ವಿನಾಶದ ಶಕ್ತಿಗಳು – ಈ ಮೂರೂ ಶಕ್ತಿಗಳು ನಮ್ಮಲ್ಲಿವೆ ಮತ್ತು ಅವುಗಳನ್ನು ನಾವು ಬಳಸುತ್ತೇವೆ. ಒಬ್ಬ ಗುರು ಈ ಮೂರೂ ಶಕ್ತಿಗಳನ್ನು ಬಳಸಬೇಕು!!" "ಸೃಷ್ಟಿಯ ಶಕ್ತಿಗಳು ಮತ್ತು ಬದುಕನ್ನು ಪೋಷಿಸುವ ಶಕ್ತಿಗಳೇನೋ ಅದ್ಭುತವಾದವುಗಳು ಆದರೆ ವಿನಾಶದ ಶಕ್ತಿಗಳ ಬಗ್ಗೆ ಏನು ಹೇಳುತ್ತೀರಿ?" ಅವರು ಹೇಳಿದರು, "ವ್ಯಕ್ತಿಯಲ್ಲಿರುವ ಅಜ್ಞಾನವನ್ನು ನೀವು ನಾಶ ಮಾಡಬೇಕು. ಗುರು ರಿಸ್ಕ್‌ಗಳನ್ನು ತೆಗೆದುಕೊಳ್ಳಬೇಕು ಮತ್ತು ದೂಷಣೆಯನ್ನೂ ತೆಗೆದುಕೊಳ್ಳಬೇಕು. ಜನರು ತಿದ್ದಿಕೊಳ್ಳಬಹುದು ಅಥವ ಕೋಪಗೊಂಡು ಹೊರ ಹೋಗಬಹುದು. ಆ ರಿಸ್ಕ್‌ಅನ್ನು ಗುರು ತೆಗೆದುಕೊಳ್ಳಲೇಬೇಕು. ನೀವೂ ಆ ರಿಸ್ಕ್ ತೆಗೆದುಕೊಳ್ಳಬೇಕು. ಹಾಗೆ ಮಾಡದಿದ್ದರೆ ನೀವು ಪರಿಪೂರ್ಣ ಗುರುವಲ್ಲ." ನನ್ನ ಗುರು ಬಹಳ ಕಠಿಣವಾಗಿದ್ದರು; ಅವರು ಎಂದಿಗೂ ಅಹಂನ ಪ್ರದರ್ಶನಕ್ಕೆ ಪ್ರೋತ್ಸಾಹಿಸುತ್ತಿರಲಿಲ್ಲ. ಅವರು ಇದನ್ನು ನಯವಾಗಿ, ಘನತೆಯಿಂದ ಮತ್ತು ನಿರ್ದಯವಾಗಿ ಮಾಡುತ್ತಿದ್ದರು. ಇದನ್ನು ನಿಮಗೆ ಹೇಳುತ್ತಿರುವ ಕಾರಣವೇನೆಂದರೆ ಜನರು ನನ್ನನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ನೀವು ನನ್ನನ್ನು ಅರ್ಥ ಮಾಡಿಕೊಳ್ಳಬೇಕೆಂದು ನಾನು ನಿರೀಕ್ಷಿಸುವುದಿಲ್ಲ; ನೀವು ಅರ್ಥಮಾಡಿಕೊಳ್ಳದಿದ್ದರೂ ಪರವಾಗಿಲ್ಲ ನನ್ನನ್ನು ಅನುಸರಿಸಿದರೆ ಸಾಕು!! ಒಂದು ದಿನ ನೀವೂ ಗುರುವಾಗುತ್ತೀರಿ. ನೀವು ಈ ರೀತಿಯಲ್ಲಿ ವೇದಿಕೆಯ ಮೇಲೆ ಕುಳಿತುಕೊಳ್ಳದಿರಬಹುದು; ಅದರ ಅವಶ್ಯಕತೆಯಿಲ್ಲ. ನಿಮಗಿಂತ ಕಿರಿಯರನ್ನು ಅಥವ ಮತ್ತಾರನ್ನೋ ಮಾರ್ಗದರ್ಶಿಸುತ್ತೀರಿ ಅಥವ ತಿಳಿವಳಿಕೆಯನ್ನು ಕೊಡಲು ಪ್ರಯತ್ನಿಸುತ್ತೀರಿ, ಆಗ ಗುರುವೊಬ್ಬನು ಎದುರಿಸುವ ಕಷ್ಟಗಳನ್ನು ಕಂಡುಕೊಳ್ಳುತ್ತೀರಿ ಮತ್ತು ನನ್ನ ಬಗ್ಗೆ ನಿಮಗೆ ಕನಿಕರ ಮೂಡುತ್ತದೆ!! ಅದೇ ಗುರುವಿನ ಪಾತ್ರ.

ಫೆಬ್ರವರಿ 2006

ಅಮರರವರಂಥ ಮಾಸ್ಟರ್‌ಗಳು ನಮ್ಮನ್ನು ಮೇಲೆತ್ತಲು ಬರುತ್ತಾರೆ. ಅವರಂತಹ ಮಾಸ್ಟರ್‌ಗಳು ಪ್ರತಿ ಬಾರಿ ಕೆಳಗೆ ಬಂದಾಗಲೂ ಇಡೀ ಮನುಕುಲವನ್ನು ಮೇಲೆತ್ತುತ್ತಾರೆ. ಇವೆಲ್ಲವುಗಳ ಜೊತೆಯಲ್ಲಿ, ಒಂದು ನಿಜಾಂಶವನ್ನು ಅಥವ ಸತ್ಯವನ್ನು ನಾವು ಗಮನಿಸಬೇಕು – ನಾವು ಬದಲಾಗದೇ ಪ್ರಪಂಚ ಬದಲಾಗುವುದಿಲ್ಲ, ಏಕೆಂದರೆ ನಾವೇ ಪ್ರಪಂಚ. ನಾವು ಮಾನಸಿಕವಾಗಿ ಕತ್ತಲನ್ನು ತಿರಸ್ಕರಿಸಿದರೆ ಸಾಕು, ಅದ್ಭುತವಾದ ವಿಷಯಗಳು ನಡೆಯುತ್ತವೆ. ಕತ್ತಲನ್ನು ಮಾನಸಿಕವಾಗಿ ತಿರಸ್ಕರಿಸಿ ಆಗ ಈ ತಿರಸ್ಕಾರದ ತರಂಗಗಳು ಬಲಗೊಳ್ಳುತ್ತವೆ ಮತ್ತು ನೀವೇ ಪ್ರಾರಂಭಿಕರಾಗಿರುವ ಮಹಾನ್ ಕ್ರಾಂತಿಯೊಂದು ಪ್ರಾರಂಭವಾಗುವುದನ್ನು ನೀವು ಕಾಣುತ್ತೀರಿ. ನಮ್ಮೊಳಗಿನ ಮತ್ತು ಸುತ್ತಮುತ್ತಲಿನ ಕತ್ತಲನ್ನು ನಾವು ತಿರಸ್ಕರಿಸಬೇಕು ಮತ್ತು ಬೆಳಕನ್ನು ಸ್ವಾಗತಿಸಬೇಕು. ಈಗ ಕತ್ತಲನ್ನು ತಿರಸ್ಕರಿಸಬೇಕಾದ ಸಮಯದಲ್ಲಿದ್ದೇವೆನ್ನುವುದೂ ವಾಸ್ತವವೇ. ನಾವು ಆಯ್ಕೆ ಮಾಡಿಕೊಳ್ಳಬೇಕಾದ ಸಮಯದಲ್ಲಿದ್ದೇವೆ. ಈಗ ಆಯ್ಕೆ ಮಾಡಿಕೊಳ್ಳಬೇಕು ಮತ್ತು ಕತ್ತಲನ್ನು ತಿರಸ್ಕರಿಸದಿದ್ದರೆ ಅದು ನಮ್ಮನ್ನು ನಾಶಮಾಡದಿರಬಹುದು ಆದರೆ ಅದು ನಮ್ಮನ್ನು ಅಪ್ರಯೋಜಕರನ್ನಾಗಿಸುತ್ತದೆ, ನಿಶ್ಶಕ್ತರನ್ನಾಗಿಸುತ್ತದೆ. ಋಷಿಗಳ ಸರಳ ವಿಧಾನಗಳನ್ನು ಅನುಸರಿಸಿದರೆ ನಾವು ಯಾವಾಗಲೂ ಬೆಳಕಿನಲ್ಲಿರುತ್ತೇವೆ, ಬೆಳಕು ಯಾವಾಗಲೂ ನಮ್ಮ ಜೊತೆಯಲ್ಲಿರುತ್ತದೆ. ಸೂರ್ಯನಂತೆ ಪ್ರಕಾಶಿಸುವುದಕ್ಕಾಗಿ ನಾವು ಋಷಿಗಳ ಕೆಳಗೆ ಸೇರಿದ್ದೇವೆನ್ನುವುದನ್ನು ನೆನಪಿಡಬೇಕು. ನಾವು ಪ್ರತಿಯೊಬ್ಬರೂ ಮಹಾನ್ ಸೂರ್ಯ, ಆದರೆ ಈ ಸಾವಿರಾರು ವರ್ಷಗಳಲ್ಲಿ ಕೇವಲ ನೆರಳಿನಂತೆ ಬದುಕುತ್ತಾ ಬಂದಿದ್ದೇವೆ. ಇನ್ನು ಮುಂದೆ ನೆರಳಿನಂತೆ ಬದುಕುವುದನ್ನು ನಿಲ್ಲಿಸೋಣ ಮತ್ತು ಸೂರ್ಯನಂತೆ ಪ್ರಕಾಶಿಸೋಣ.

ಇಲ್ಲಿನ ಬದುಕನ್ನು ಸಂಭ್ರಮಿಸಲು ನಾವು ಈ ಭೂಮಿಗೆ ಬಂದಿದ್ದೇವೆನ್ನುವುದನ್ನು ಮರೆಯಬಾರದು. ಈ ಭೂಮಿಯ ಮೇಲಿನ ಬದುಕು ಅತ್ಯಂತ ಸುಂದರವಾದ ಬದುಕು. ಇದನ್ನು ತಿಳಿಯಬೇಕಾದರೆ ನಾವು ಬೇರೆ ಭೂಮಿಗಳಿಗೆ ಹೋಗಬೇಕು. ಈ ಭೂಮಿ ಅತ್ಯಂತ ಸುಂದರವಾದ ಸ್ಥಳವಾದ್ದರಿಂದಲೇ ನಾವಿಲ್ಲಿಗೆ ಬಂದಿದ್ದೇವೆಂದು ಅಮರರವರು ಹೇಳಿದ್ದರು. ಇಲ್ಲಿನ ಸೌಂದರ್ಯವನ್ನು ಅನುಭವಿಸುವುದಕ್ಕೆ ಮಾತ್ರವಲ್ಲದೇ ಇಲ್ಲಿನ ಸೌಂದರ್ಯವನ್ನು ಹೆಚ್ಚಿಸಲು ಕೂಡಾ ನಾವಿಲ್ಲಿಗೆ ಬಂದಿದ್ದೇವೆ. ಆ ಕೊಡುಗೆ ನೀಡುವ ಶಕ್ತಿ ನಮ್ಮಲ್ಲಿದೆ. ಮಾನವರಾದ ನಾವು ಈಗಾಗಲೇ ಏನಿದೆಯೋ ಅದಕ್ಕೆ ಇನ್ನೂ ಹೆಚ್ಚು ಸೇರಿಸಬಲ್ಲೆವು ಮತ್ತು ಉತ್ತಮಗೊಳಿಸಬಲ್ಲೆವು. ನಮ್ಮಲ್ಲಿ ಅನೇಕರಿಗೆ ಇದರ ಅರಿವಿಲ್ಲದಿರಬಹುದು, ಆದರೆ ಎಲ್ಲಿ ಬೇಕಾದರೂ, ಏನನ್ನು ಬೇಕಾದರೂ ನಾವು ಉತ್ತಮಪಡಿಸಬಹುದು. ಇಲ್ಲಿನ ಬದುಕನ್ನು ಉತ್ತಮಪಡಿಸೋಣ, ನಮ್ಮ ಸ್ವಂತ ಬದುಕನ್ನು ಉತ್ತಮಪಡಿಸಿಕೊಳ್ಳೋಣ. ನಾವು ಸಾಮಾನ್ಯರಂತೆ ಬದುಕುವುದಕ್ಕಿಂತಲೂ ಬಹಳ ಹೆಚ್ಚಿನದನ್ನು ಮಾಡಬಹುದು. ಸಾಮಾನ್ಯ ರೀತಿಯಲ್ಲಿ ಬಾಳುವುದನ್ನು ಮುಂದುವರಿಸಿದರೆ ನಮ್ಮನ್ನು ಯಾರೂ ದೂರುವುದಿಲ್ಲ, ಯಾರೂ ಜಡ್ಜ್ ಮಾಡುವುದಿಲ್ಲ ಆದರೆ ಸೃಜನಾತ್ಮಕ ಶಕ್ತಿಗಳಿಗೆ ಸೋಲುಂಟುಮಾಡಿದಂತಾಗುತ್ತದೆ. ಉತ್ತಮವಾಗಿ ಬದುಕುವುದನ್ನು ನಮ್ಮಿಂದ ನಿರೀಕ್ಷಿಸಲಾಗಿದೆ; ಬೇರೆಯವರಂತೆ, ಸಾಮಾನ್ಯ ಜನರಂತೆ ಬದುಕುವುದಲ್ಲ. ಹೀಗೆ ಮಾಡದಿದ್ದರೆ ದೇವರ ಇಚ್ಛೆಗೆ ನಾವು ಸೋಲುಂಟು ಮಾಡಿದ ಹಾಗೆ ಮತ್ತು ಎಲ್ಲಕ್ಕೂ ಮಿಗಿಲಾಗಿ ನಮಗೆ ನಾವೇ ಸೋಲುಂಟುಮಾಡಿಕೊಂಡ ಹಾಗೆ. ಬದುಕಿಗೆ ಇನ್ನೂ ಹೆಚ್ಚಿನ ಅರ್ಥವಿದೆ. ಬದುಕಿನಲ್ಲಿ ಏನಿದೆಯೆನ್ನುವುದನ್ನು ನಾವು ಕಂಡುಕೊಳ್ಳೋಣ. ಆದರೆ ಹೇಗೆ ಕಂಡುಕೊಳ್ಳುವುದು? ನಾನು ಕಂಡಿರುವಂತೆ ಮತ್ತು ನನ್ನ ಅನುಭವದಂತೆ ಅದಕ್ಕಿರುವ ಒಂದು ದಾರಿಯೆಂದರೆ 'ಧ್ಯಾನ'. ನೀವು ಧ್ಯಾನ ಮಾಡಿದಾಗ ಹೆಚ್ಚು ತಿಳಿದುಕೊಳ್ಳುತ್ತೀರಿ. ಒಂದು ವಾಕ್ಯವನ್ನು ನೀವು ಓದಿದರೆ, ಇನ್ನೂ ಹತ್ತು ವಾಕ್ಯಗಳ ಜ್ಞಾನ ಪಡೆಯುತ್ತೀರಿ. ನಿಮಗೆ ಒಂದು ವಿಚಾರ ಬಂದಾಗ, ಅದರ ಹಿಂದಿರುವ ನೂರಾರು ವಿಚಾರಗಳು ನಿಮಗೆ ತಿಳಿಯುತ್ತವೆ! ಗ್ರಹಿಕೆಯ ಈ ಸಾಮರ್ಥ್ಯ ನೀವು ಧ್ಯಾನ ಮಾಡಿದಾಗ ಹೆಚ್ಚಾಗುತ್ತದೆ. ಆದ್ದರಿಂದಲೇ ಧ್ಯಾನ ಅಷ್ಟೊಂದು ಮುಖ್ಯ.

ಈ ಸಂಸ್ಥೆಯನ್ನು ಸ್ಥಾಪಿಸಲು ನಾನು ಮಾಡಿದ ಪ್ರಯತ್ನಗಳ ಬಗ್ಗೆ ಜನರು ಬಹಳಷ್ಟು ಮಾತನಾಡುತ್ತಾರೆ ಮತ್ತು ಅವರು ನನ್ನ ಕೆಲಸವನ್ನು ಮೆಚ್ಚಿಕೊಳ್ಳುತ್ತಾರೆ. ಬಹುಶಃ ಮಾನವ ಮಟ್ಟದಲ್ಲಿ ನಾನು ಸ್ಫೂರ್ತಿಯಾಗಿರಬಹುದು. ಆದರೆ, ಹಣವಿಲ್ಲದೆ ಮತ್ತು ಜನರ ಸಹಾಯವಿಲ್ಲದೆ ನನಗೆ ಏನನ್ನೂ ಮಾಡಲಾಗುತ್ತಿರಲಿಲ್ಲ. ನನಗೆ ನೂರು ರೂಪಾಯಿ ಕೂಡ ಅತ್ಯಮೂಲ್ಯವಾಗಿದ್ದ ದಿನಗಳು ನೆನಪಿದೆ. ಜನರು ನನಗೆ ಸಾವಿರಾರು ರೂಪಾಯಿಗಳನ್ನು ಕೊಟ್ಟರು. ಈಗ ನನಗೆ ಸಹಾಯಮಾಡುತ್ತಿರುವ ಜನರು ತಮ್ಮ ಹೆಸರನ್ನು ಬಹಿರಂಗ ಪಡಿಸಿಕೊಳ್ಳಲು ಇಷ್ಟಪಡುತ್ತಿಲ್ಲ. ಇದೇ ಮಾನಸದ ವಿಶೇಷತೆ. ಆದ್ದರಿಂದ ನಾನವರ ಭಾವನೆಗಳನ್ನು ಗೌರವಿಸುತ್ತೇನೆ. ಅವರಿಲ್ಲದೆ ಮತ್ತು ನನ್ನಲ್ಲಿರುವ ಕಾರ್ಯಕರ್ತರ ಪಡೆಯಿಲ್ಲದೆ, ವಾಸ್ತವದಲ್ಲಿ ನನಗೇನನ್ನೂ ಮಾಡಲಾಗುವುದಿಲ್ಲ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಹೀಗೆ ಹೇಳಿದ ಪ್ರತಿಬಾರಿಯೂ ಅದು ನನ್ನ ಹೃದಯದ ಮಾತಾಗಿರುತ್ತದೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

25–08–2019

ಈ ದಿನ ಭಗವಾನ್ ಶ್ರೀಕೃಷ್ಣ ಮತ್ತು ಮಹರ್ಷಿ ಅಮರರವರ ಉಪಸ್ಥಿತಿಯಿಂದ ನಾವು ಧನ್ಯರಾಗಿದ್ದೇವೆ. ಸುಧಾಕರ್ ಸರ್ ಅವರು ಹೇಳಿದ ಹಾಗೆ ಅವರಿಬ್ಬರ ಸಂಬಂಧದಲ್ಲಿ ಏನೋ ವಿಶೇಷತೆಯಿದೆ. ಅವರ ಹಿಂದಿನ ಒಂದು ಜನ್ಮದಲ್ಲಿ ಶ್ರೀಕೃಷ್ಣನು ಶ್ರೀಖಂಡ್ಯನ ರೂಪದಲ್ಲಿ ಭೌತಿಕವಾಗಿ ಅವರ ಮನೆಯಲ್ಲಿ ಕೆಲಸಮಾಡಿ ಅವರ ಸೇವೆಮಾಡಿದ ಉದಾಹರಣೆಯನ್ನು ಅವರು ಕೊಟ್ಟರು. ಶ್ರೀಕೃಷ್ಣನು ಭೌತಿಕ ದೇಹ ಪಡೆದು ಅಮರರವರ ಸೇವೆಯನ್ನು ಭೌತಿಕ ಮಟ್ಟದಲ್ಲಿ ಮಾಡಲು ಕಾರಣವೇನು ಎಂದು ನಾನು ಆಶ್ಚರ್ಯಪಡುತ್ತಿದ್ದೆ. ದೇವರುಗಳನ್ನು ಕೂಡ ಆಕರ್ಷಿಸುವಂಥದ್ದೇನೋ ಒಂದು ಮಹರ್ಷಿ ಅಮರರವರಲ್ಲಿದೆ. ವಿಶ್ವಾಮಿತ್ರ ಮಹರ್ಷಿಗಳು ಮತ್ತು ಮಹರ್ಷಿ ಅಮರರವರಂಥ ಕೆಲವು ಮಹಾನ್ ಆತ್ಮಗಳೊಂದಿಗೆ ಇರಲು ದೇವರುಗಳು ಬಯಸುತ್ತಾರೆ ಎಂದು ಗುರೂಜಿಯವರು ಹೇಳಿದ್ದರು. ಅವರುಗಳಲ್ಲಿ ದೇವರುಗಳನ್ನೂ ಆಕರ್ಷಿಸುವಂತಹ ಅತ್ಯಂತ ಸುಂದರವಾದುದು ಮತ್ತು ಅತ್ಯಂತ ಉನ್ನತವಾದದು ಏನೋ ಇದೆ. ಬಹುಶಃ ಅದು ಪ್ರೀತಿಯಿರಬಹುದು. ಪರಿಶುದ್ಧತೆಯಿರಬಹುದು ಅಥವ ಮತ್ತಾವುದೋ ವಿಷಯಗಳಿರಬಹುದು, ಅದು ನನಗೆ ತಿಳಿದಿಲ್ಲ.

ಅದೇ ರೀತಿ ದೇವಿ ಮಹಾಲಕ್ಷ್ಮಿಯೊಂದಿಗೆ ಅಮರರವರಿಗೆ ವಿಶೇಷ ಸಂಬಂಧವಿತ್ತು. ಆಕೆ ಈ ಭೂಮಿಗೆ ಬಂದ ಪ್ರತಿ ಬಾರಿಯೂ ಅವರ ಮಗಳಾಗಿ ಜನ್ಮವೆತ್ತುತ್ತಿದ್ದರು. ಮಹರ್ಷಿ ಅಮರರವರು ಜನಕ ಮಹಾರಾಜರಾಗಿದ್ದರೆಂದು ನಮಗೆ ತಿಳಿದಿದೆ. ಅಮರರವರು ಸಾವಿರಾರು ವರ್ಷಗಳ ಹಿಂದೆ ರೋಮ್ ನಗರವನ್ನು ಕಟ್ಟಿದ ರೋಮಪಾದ ಮಹರ್ಷಿ ಆಗಿದ್ದರು. ದೇವಿ ಮಹಾಲಕ್ಷ್ಮಿಯು, ರೋಮಪಾದ ಮಹರ್ಷಿಗಳ ಮಗಳಾದ 'ಅಪೂರ್ವ ಕನ್ಯೆ' ಆಗಿ ಜನ್ಮವೆತ್ತಿದ್ದಳು. ಅವಳು ಈಗ ಕೂಡ ಭೌತಿಕವಾಗಿ ಈ ಭೂಮಿಯ ಮೇಲಿದ್ದಾಳೆ. ಆದರೆ ಆಕೆಯ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲ. ದೇವಿ ಮಹಾಲಕ್ಷ್ಮಿಯು ಮಹರ್ಷಿ ಅಮರರವರೊಂದಿಗೆ ಮಾತನಾಡಿದ ಒಂದು ಘಟನೆಯನ್ನು ಗುರೂಜಿಯವರು ಹೇಳುತ್ತಿದ್ದುದು ನನಗೆ ನೆನಪಿದೆ. ಒಮ್ಮೆ ದೇವಿ ಮಹಾಲಕ್ಷ್ಮಿಯನ್ನು ಪೂಜಿಸಲು ಜನರು ಸೇರಿದ್ದರು. ಅವಳು ಅಮರರವರೊಂದಿಗೆ ಮಾತನಾಡಿ ಹೀಗೆ ಹೇಳಿದಳು, "ಜನರು ಲೌಕಿಕ ಸಂಪತ್ತನ್ನು ಕೇಳುತ್ತಾರೆ. ನಾನು ಲೌಕಿಕ ಸಂಪತ್ತನ್ನು ಮಾತ್ರವೇ ಕೊಡಲಾರೆ. ಜನರು ಲೌಕಿಕ ಮತ್ತು ಆಧ್ಯಾತ್ಮಿಕ ಸಂಪತ್ತುಗಳೆರಡನ್ನೂ ಕೇಳಬೇಕು, ಆಗ ಮಾತ್ರವೇ ಆ ಸಂಪತ್ತುಗಳನ್ನು ಅವರಿಗ ಕೊಡಬಲ್ಲೆ." ಇದು ಹೀಗೇಕೆ ಎಂದು ನಾನು ಆಶ್ಚರ್ಯಪಡುತ್ತಿದ್ದೆ. ಬಹುಶಃ ಪ್ರತಿಯೊಂದರಲ್ಲೂ ಒಂದು ರೀತಿಯ ಸಮತೋಲನವಿರಬೇಕೇನೋ. ನಮ್ಮಲ್ಲಿ ಆಧ್ಯಾತ್ಮಿಕ ಸಂಪತ್ತಿದ್ದಾಗ ಮಾತ್ರವೇ ನಾವು ಲೌಕಿಕ ಸಂಪತ್ತನ್ನು ಸರಿಯಾಗಿ ಬಳಸಿಕೊಳ್ಳುತ್ತೇವೆ. ಅದೇನೇ ಇರಲಿ, ಮಹರ್ಷಿ ಅಮರರವರು ದೇವರುಗಳಿಂದ ಪಡೆದು ನಮಗೆ ಕೊಟ್ಟಿರುವಂಥ ಈ ರೀತಿಯ ನಿಯಮಗಳಿವೆ; ಅಂತಹ ಗಹನವಾದ ಸತ್ಯಗಳಿವೆ.

ನಮಗೆ ಅವರ ಅತ್ಯಾಶ್ಚರ್ಯಕರ ಕೆಲಸಗಳಲ್ಲಿ ಕೆಲವು ಮಾತ್ರವೇ ಗೊತ್ತಿದೆ. ಅವರ ಕೆಲಸಗಳಲ್ಲಿ 90%ಗೂ ಹೆಚ್ಚಿನ ಭಾಗವನ್ನು ತಿಳಿಸಲಾಗಿಲ್ಲವೆಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ಬಹುಶಃ ಮುಂದಿನ ದಿನಗಳು ನಮಗೆ ಅವರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿಸಬಹುದು. ನಾವು ಅವರ ಹಿರಿಮೆಯ ಬಗ್ಗೆ ಆಶ್ಚರ್ಯಪಡಬಹುದು ಅಷ್ಟೆ. ಅಂತಹ ಸಾಮರ್ಥ್ಯಗಳು ಮತ್ತು ಸಂಪರ್ಕಗಳಿದ್ದರೂ ಸಹ ಅವರು ಮೂಲತಃ ವಿನಯವಂತರು. ಗುರೂಜಿಯವರು ಅಮರರವನ್ನು 'ವಿನಯವಂತಿಕೆಯೇ ಮೂರ್ತಿವೆತ್ತಂಥವರು' ಎಂದು ಬಣ್ಣಿಸಿದ್ದರು. ನಮ್ರತೆ, ವೈರಾಗ್ಯ, ಶರಣಾಗತಿ, ಪ್ರೀತಿ, ನಂಬಿಕೆ, ಋಷಿಗಳ ಕೆಲಸಕ್ಕೆ ಬದ್ಧತೆಯಂತಹ ಅನೇಕ ವಿಷಯಗಳನ್ನು ಅವರು ತಮ್ಮ ಬದುಕಿನ ಮೂಲಕ ನಮಗೆ ಕಲಿಸಿದರು.

ಅಂತಹ ಮಹಾನ್ ಮಾಸ್ಟರ್‌ರವರ ಸಂಪರ್ಕದಿಂದ ನಾವು ಹೇಗೆ ಪ್ರಯೋಜನ ಪಡೆಯಬೇಕು? ಮಾಸ್ಟರ್ ಒಬ್ಬರ ಸಂಪರ್ಕವನ್ನು ಬಳಸಿಕೊಳ್ಳುವ ಅತ್ಯುನ್ನತ ವಿಧಾನವೆಂದರೆ ಅವರು ಕಲಿಸಿಕೊಟ್ಟಿದ್ದನ್ನು ಜೀವನದಲ್ಲಿ ಅಳವಡಿಸಿ ಕೊಳ್ಳುವುದು; ಅದು ಮಹಾನ್ ಮಾಸ್ಟರ್‌ಗೆ ಕೊಡುವ ಅತ್ಯುತ್ತಮ ಕಾಣಿಕೆಯಾಗಿದೆ. ಸಾಧನೆಯಲ್ಲಿ ಅಡ್ಡದಾರಿಗಳಿಲ್ಲವೆಂದು ಗುರೂಜಿಯವರು ಹೇಳುತ್ತಿದ್ದರು. ನಾವು ಏಕಕಾಲದಲ್ಲಿ ಒಂದೇ ಹೆಜ್ಜೆಯಿಡಬೇಕು. ವೇಗವಾಗಿ ಸಾಗುವುದು ಸಾಧ್ಯವಿಲ್ಲವೆಂದಲ್ಲ. ಮಹರ್ಷಿ ಅಮರರವರೇ ಹೇಳುತ್ತಿದ್ದರು, "ದೇವರಿಗೆ ಸಂಪೂರ್ಣವಾಗಿ ಶರಣಾಗಲು ಕೇವಲ ಒಂದು ಕ್ಷಣ ಸಾಕು, ಆದರೆ ಆ ಒಂದು ಕ್ಷಣಕ್ಕೆ ಸಿದ್ಧರಾಗಲು ಅನೇಕ ಜನ್ಮಗಳ ಸಿದ್ಧತೆ ಬೇಕು." ನಾವು ಮುನ್ನಡೆದಂತೆಲ್ಲಾ ಅಲ್ಲಿ ಪರೀಕ್ಷೆಗಳಿರುತ್ತವೆ, ಅವುಗಳಲ್ಲಿ ನಾವು ಉತ್ತೀರ್ಣರಾಗಬೇಕು. ಉತ್ತೀರ್ಣರಾದಾಗ ಮಾತ್ರವೇ ನಾವು ಮುಂದಿನ ಹಂತಕ್ಕೆ ಹೋಗಬಹುದು. ನಾನು ಈ ರೀತಿ ಮಾತನಾಡಿದಾಗಲೆಲ್ಲಾ ನಾನು ಅರ್ಥ ಮಾಡಿಕೊಂಡಿದ್ದನ್ನು ಹಂಚಿಕೊಳ್ಳುತ್ತಿರುತ್ತೇನೆ ಅಷ್ಟೆ. ನಾವೆಲ್ಲರು ಒಟ್ಟಿಗೆ ಅರ್ಥಮಾಡಿಕೊಂಡು ಒಟ್ಟಿಗೇ ಪ್ರಯಾಣ ಬೆಳೆಸಲು ಇದು ಸಹಾಯಮಾಡುತ್ತದೆ.

ಮತ್ತೊಂದು ಸ್ವಾರಸ್ಯಕರ ವಿಷಯ. ಇತ್ತೀಚೆಗೆ ಜನರ ಗುಂಪೊಂದು ತಪೋನಗರಕ್ಕೆ ಬಂದಿತ್ತು. ಇಲ್ಲಿ ಅವರ ಧ್ಯಾನದ ಗುಣಮಟ್ಟ ಅತ್ಯುತ್ತಮವಾಗಿತ್ತು ಎನ್ನುವುದನ್ನು ಅವರು ಗಮನಿಸಿದರು. ಧ್ಯಾನಕ್ಕಾಗಿ ಅವರು ಬೇರೆ ಬೇರೆ ಸ್ಥಳಗಳಿಗೆ ಹೋಗಿದ್ದರು, ಇಲ್ಲಿ ಕೂಡ ಅವರು ಬೇರೆ ಬೇರೆ ಕಟ್ಟಡಗಳಲ್ಲಿ ಧ್ಯಾನ ಮಾಡಿದರು. ಭಾನುವಾರದ ತರಗತಿಯ ಸಮಯದಲ್ಲಿ ಅವರ ಧ್ಯಾನದ ಗುಣಮಟ್ಟ ಅತ್ಯಂತ ಹೆಚ್ಚಿದ್ದುದನ್ನು ಅವರು ಗಮನಿಸಿದರು. ಹೀಗೇಕೆ ಎಂದು ಅವರು ಆಶ್ಚರ್ಯಪಟ್ಟರು! ಭಾನುವಾರದ ತರಗತಿಯ ಸಮಯದಲ್ಲಿ ಋಷಿಗಳು ಮತ್ತು ದೈವೀ ಪುರುಷರ ಇರುವಿಕೆಯ ಅನುಗ್ರಹ ನಮಗಿರುತ್ತದೆ ಎನ್ನುವುದು ನಮಗೆಲ್ಲ ತಿಳಿದಿದೆ. ವಿಶೇಷ ಚೈತನ್ಯಗಳನ್ನು ಕೊಟ್ಟು ನಮಗೆ ಸಹಾಯ ಮಾಡುವುದಕ್ಕಾಗಿಯೇ ಅವರು ಇಲ್ಲಿಗೆ ಸೂಕ್ಷ್ಮ ಮಟ್ಟದಲ್ಲಿ ಬರುತ್ತಾರೆ. ತರಗತಿಗಳನ್ನು ವಿಶೇಷವನ್ನಾಗಿಸಲು, ಋಷಿಗಳ ಮತ್ತು ದೈವೀ ವ್ಯಕ್ತಿಗಳ ಇರುವಿಕೆಯಷ್ಟೇ ಸಾಕು. ಅವರ ಇರುವಿಕೆಯು ನಮ್ಮ ಅನೇಕ ಕರ್ಮಗಳನ್ನು ಸವೆಸುತ್ತವೆ.

ಮುಂದಿನ ವಿಷಯ ಲೈಟ್ ಚಾನಲಿಂಗ್ ಬಗ್ಗೆ. ಲೈಟ್ ಚಾನಲಿಂಗ್ ಕೆಲಸವನ್ನು ಅದರ ಕಾರ್ಯಕರ್ತರು ಪ್ರತಿ ವರ್ಷವೂ ಆಯ್ಕೆ ಮಾಡಿಕೊಳ್ಳಬೇಕು. ವಿಷಯವೇನೆಂದರೆ, ಆಯ್ಕೆ ಮಾಡಿಕೊಳ್ಳಲು ಅಥವ ಬಿಡಲು ಸ್ವಾತಂತ್ರ್ಯವಿರಬೇಕು. ಆದ್ದರಿಂದ ಆಯ್ಕೆ ಮಾಡಿಕೊಳ್ಳಲು ಇದೊಂದು ಅವಕಾಶ. ಲೈಟ್ ಚಾನಲಿಂಗ್ ಕಾರ್ಯಕರ್ತರು ಕೆಲಸವನ್ನು ಆಯ್ಕೆಮಾಡಿಕೊಂಡಿದ್ದಾರೆಂದು ನಮಗೆ ತಿಳಿಯುವುದು ಹೇಗೆ? ಲೈಟ್ ಚಾನಲ್ ಕಾರ್ಯಕರ್ತರಾಗಿ ಮುಂದುವರಿಯುವುದಕ್ಕೆ ಅವರು ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳಬೇಕು. ಅದನ್ನು ಯಾವಾಗ ಮಾಡಬೇಕು? ಅವರು ಅದನ್ನು ಪ್ರತಿ ವರ್ಷವೂ, ಮೇ ತಿಂಗಳಲ್ಲಿ ಗುರೂಜಿಯವರ ಹುಟ್ಟು ಹಬ್ಬದ ಕಾರ್ಯಕ್ರಮಕ್ಕೆ ಮುಂಚಿತವಾಗಿ ಮಾಡಬೇಕು. ಗುರೂಜಿಯವರ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಈ ಲೈಟ್ ಚಾನಲಿಂಗ್ ಕಾರ್ಯಕರ್ತರ ಸಂಪೂರ್ಣ ಗುಂಪು, ಈ ಕೆಲಸದಲ್ಲಿ ಪುನಃ ತೊಡಗಿಕೊಳ್ಳುತ್ತಾರೆ. ನಿಮಗೆ ಕೆಲಸಕ್ಕೆ ಸೇರಲು ಸಾಧ್ಯವಾಗದಿದ್ದರೆ ಪರವಾಗಿಲ್ಲ. ನಮಗದು ಅರ್ಥವಾಗುತ್ತದೆ. ನಿಮ್ಮ ಬದುಕಿನ ಸನ್ನಿವೇಶವನ್ನು ನಾವು ಗೌರವಿಸುತ್ತೇವೆ. ನಮ್ಮ ಭಾಗದಿಂದ ಯಾವ ರೀತಿಯ ಜಡ್ಜ್‌ಮೆಂಟ್ ಇರುವುದಿಲ್ಲ. ನಮ್ಮ ಒಂದೇ ಕೋರಿಕೆಯೆಂದರೆ, ನಿಮಗೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲವೆನ್ನುವುದನ್ನು ದಯವಿಟ್ಟು ನಮಗೆ ತಿಳಿಸಿ. ಇದು ಯೋಜನೆಯನ್ನು ಸರಿಯಾಗಿ ಮಾಡಲು ಸಹಾಯಮಾಡುತ್ತದೆ. ನಿಮಗೆ ಮತ್ತೊಮ್ಮೆ ಕೆಲಸಮಾಡಲು ಸಾಧ್ಯವೆನಿಸಿದಾಗ, ನೀವು ಮತ್ತೊಮ್ಮೆ ಕೆಲಸಕ್ಕೆ ಸೇರಬಹುದು.

ಕೆಲಸ ಮಾಡಲು ಇದೊಂದೇ ದಾರಿಯಲ್ಲವೆಂದೂ ನಮಗೆ ತಿಳಿದಿದೆ. ಕೆಲಸ ಮಾಡಲು ಇರುವ ಮತ್ತೊಂದು ದಾರಿಯೆಂದರೆ, ಪ್ರೀತಿಯನ್ನು ಅಭಿವ್ಯಕ್ತಿಸುವುದು. ನಾವು ಪ್ರೀತಿಯನ್ನು ಅಭಿವ್ಯಕ್ತಿಸಿದಾಗ, ನಾವು ಋಷಿಗಳಿಗಾಗಿಯೇ ಕೆಲಸ ಮಾಡುತ್ತಿರುತ್ತೇವೆ; ಅವರ ಚಾನಲ್ ಆಗುತ್ತೇವೆ. ಇನ್ನೊಂದು ಮಟ್ಟದಲ್ಲಿ ನಾವು ಕಾರ್ಯಕರ್ತರಾಗಿರುತ್ತೇವೆ. ಶಾಂತಿಯುನ್ನು ಹರಡಿದಾಗಲೆಲ್ಲಾ, ಸಕಾರಾತ್ಮಕವಾಗಿ ಬಾಳಿದಾಗಲೆಲ್ಲಾ ನಾವು ಋಷಿಗಳಿಗಾಗಿ ಕೆಲಸ ಮಾಡುತ್ತಿರುತ್ತೇವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ಼ೀಯು ರೂ. 4500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀಯು ರೂ. 3500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಜೊತೆಗಿನ ಪಯಣ

ಗುರೂಜಿ ಕೃಷ್ಣಾನಂದ; ಅನು: ಸುಜಾತ ವಿ

ಎಂಟು

('ಮಾನಸ ಪತ್ರದ' 1990ರ ಮೇ, ಜೂನ್ ಮತ್ತು ಜುಲೈ ಸಂಚಿಕೆಗಳಿಂದ)

ನಾನು ಅಮರರವರನ್ನು ಮಾರನೆಯ ದಿನ ಭೇಟಿ ಮಾಡಿ ಎಲ್ಲವನ್ನೂ ವರ್ಣಿಸಿದೆ. ಅವರು ಮುಗುಳ್ನಗುತ್ತಾ ಹೇಳಿದರು –

"ಉದ್ರೇಕಗೊಳ್ಳಬೇಡಿ. ಇನ್ನೂ ಅನೇಕ ರೋಮಾಂಚನಗಳು ಮುಂದೆ ಇವೆ. ಕಾಯಿರಿ."

ನಾನು ಕಾದೆ.

ಒಂದು ದಿನ ಮಹೇಶ್ ಯೋಗಿಯವರ ಅನುಯಾಯಿಯೊಬ್ಬರು ಬಂದರು. ಅವರು ಧ್ಯಾನವನ್ನು ಕಲಿಯಬಯಸಿದರು. ಅವರು ಪ್ರಖ್ಯಾತ ವ್ಯಕ್ತಿಯಾಗಿದ್ದರು ಮತ್ತು ಸ್ವಿಟ್ಸರ್‌ಲ್ಯಾಂಡ್‌ಗೆ ಹೋಗುವುದರಲ್ಲಿದ್ದರು. ಅಮರರವರಿಗೆ ಇದರ ಬಗ್ಗೆ ಎಲ್ಲಾ ತಿಳಿದಿತ್ತು. ಅವರು ಬರಿ ಮಾಹಿತಿ ಹಾಗು ಹೊಸ ತಂತ್ರಗಳನ್ನು ಪಡೆಯಲು ಬಂದಿದ್ದರೆಂದು ಕೂಡ ಅವರಿಗೆ ತಿಳಿದಿತ್ತು. ಆದರೂ ಕೂಡ ಅವರಿಗೆ ತುಂಬಾ ವಿಷಯಗಳನ್ನು ಕಲಿಸಿಕೊಟ್ಟರು, ಹಾಗು ಋಷಿಗಳಿಂದ ಬಂದ ಜ್ಞಾನ ಇರುವುದು ಎಲ್ಲರಿಗಾಗಿ ಮತ್ತು ಅದಕ್ಕೆ ಕೃತಿಸ್ವಾಮ್ಯ (copyright) ಇರುವುದಿಲ್ಲ ಎಂದು ವಿವರಿಸಿದರು! ಬಳಿಕ ಯೋಗಿಯವರ ಶಿಷ್ಯ ಅವರದೇ ಸ್ವಂತ ಶಾಲೆಯನ್ನು ಪ್ರಾರಂಭಿಸಿದರು. ನಾನು ಇತ್ತೀಚೆಗೆ ಅವರನ್ನು ಅನಿರೀಕ್ಷಿತವಾಗಿ ಭೇಟಿ ಮಾಡಿದಾಗ, ಅಮರರವರ ಬಗ್ಗೆ ಕೇಳಿಯೇ ಇಲ್ಲವೆಂಬಂತೆ ಅವರು ನಟಿಸಿದರು! ಅದೇ ಜೀವನ; ವ್ಯಾವಹಾರಿಕ ಜೀವನ; ಲಾಭ ಮಾಡುವ ಜೀವನ. ಅವರು ಸಾಕಷ್ಟು ಡಾಲರ್‌ಗಳನ್ನೂ ಮತ್ತು ವಿದೇಶಿ ಶಿಷ್ಯಂದಿರನ್ನೂ ಸಂಪಾದಿಸಿದ್ದರು.

ಅದೇ ಧ್ಯಾನವನ್ನು 5 ಸ್ಟಾರ್ ಹೋಟೆಲಿನಲ್ಲಿ ಅಪಾರ ಸಂಭಾವನೆಗೋಸ್ಕರ ಕಲಿಸಿಕೊಡುತ್ತಿದ್ದ ಮಹಿಳೆಯೊಬ್ಬರೂ ನನಗೆ ಗೊತ್ತಿತ್ತು. ಜ್ಞಾನವನ್ನು ಪಡೆಯಲು ಬಂದ ಯಾರಿಗೂ ನಿರಾಕರಿಸುವಂತಿಲ್ಲವೆಂದೂ ಮತ್ತು ಅದನ್ನು ಹೇಗೆ ಉಪಯೋಗಿಸಬೇಕೆನ್ನುವುದನ್ನು ಆ ವ್ಯಕ್ತಿಗೇ ಬಿಡಬೇಕೆಂದೂ ಅಮರರವರು ಹೇಳಿದ್ದರು. ಅದನ್ನು ದುರುಪಯೋಗ ಮಾಡಿದರೆ, ನಂತರದಲ್ಲಿ ಅಥವ ಮುಂದಿನ ಜನ್ಮದಲ್ಲಿ ಅದಕ್ಕೆ ಅವರೇ ಉತ್ತರಿಸಬೇಕಾಗುತ್ತದೆ. "ಇಂತಹ ವಿಷಯಗಳನ್ನು ಋಷಿಗಳೇ ನೋಡಿಕೊಳ್ಳುತ್ತಾರೆ. ನಾನು ಒಬ್ಬ ಕಾರ್ಯಕರ್ತ ಅಷ್ಟೆ," ಎಂದು ಅವರು ದೃಢವಾಗಿ ಹೇಳುತ್ತಿದ್ದರು.

ಅವರ ನಮ್ರತೆ ಯಾವತ್ತೂ ನಾಟಕೀಯವಾಗಿರಲಿಲ್ಲ. ಅವರ ನಿಷ್ಠೆ ಯಾವಾಗಲೂ ಟೊಳ್ಳಾಗಿರಲಿಲ್ಲ. ನಾನು ಯಾವಾಗಲೂ ಇಂತಹ ವಿಷಯಗಳನ್ನು ಗಮನಿಸುತ್ತಿದ್ದೆ ಮತ್ತು ಅವರ ಮಹಾನ್ ವ್ಯಕ್ತಿತ್ವವನ್ನು, ಅವರ ಆಳವಾದ ಸಾಮರ್ಥ್ಯವನ್ನು ಮೆಚ್ಚುತ್ತಿದ್ದೆ. ನಾನು ನೋಡಿದ ವ್ಯಕ್ತಿಗಳಲ್ಲೆಲ್ಲಾ ಕೊನೆಯವರೆಗೂ ಅವರೇ ಅತ್ಯಂತ ಎತ್ತರದ ವ್ಯಕ್ತಿಯಾಗಿ ಉಳಿದರು.

ನಾನು ಆಧ್ಯಾತ್ಮಿಕ ಕೆಲಸ ಪ್ರಾರಂಭಿಸಿದ ನಂತರ, ಹಲವಾರು ಸನ್ಯಾಸಿಗಳನ್ನು, ಆಧ್ಯಾತ್ಮಿಕ ಮುಖಂಡರನ್ನು ಮತ್ತು ಶ್ರೇಷ್ಠ ವ್ಯಕ್ತಿಗಳನ್ನು ಕಂಡಿದ್ದೇನೆ. ಆದರೆ ಯಾರೂ ಅವರ ಎತ್ತರವನ್ನು ಮುಟ್ಟಲಿಲ್ಲ. ಅವರ ಉಬ್ಬಿದ ಅಹಂಕಾರದಿಂದ ಅವರು ಟೊಳ್ಳಾಗಿ, ಸಣ್ಣವರಾಗಿ ಕಾಣುತ್ತಿದ್ದುದರಿಂದ ನನ್ನಲ್ಲಿ ತಿರಸ್ಕಾರ ಭಾವ ಮೂಡುತ್ತಿತ್ತು. ಅಮರರವರು ಬೈಬಲ್ಲಿನಿಂದ ಉಲ್ಲೇಖಿಸಿ ಹೇಳುತ್ತಿದ್ದರು, "ಮುಂದೆ ಅನೇಕ ನಕಲಿ ಪ್ರವಾದಿಗಳು ಬರುತ್ತಾರೆ." ನನಗೆ ಇದು ಯಾವಾಗಲು ಜ್ಞಾಪಕಕ್ಕೆ ಬರುತ್ತಿತ್ತು.

ಅವರು ಪರಿಪೂರ್ಣರಾದ ಕಾರ್ಯಕರ್ತರೆಂದು ಒಮ್ಮೆ ನಾನು ಹೇಳಿದೆ. ಅದಕ್ಕೆ ಅವರು ಹೇಳಿದರು, "ಯಾರು ಪರಿಪೂರ್ಣರಲ್ಲವೋ ಅವರು ಕಾರ್ಯಕರ್ತರಾಗಲು ಸಾಧ್ಯವಿಲ್ಲ." ಅವರೊಬ್ಬ ಋಷಿಯೇ? ಅವರು ಉತ್ತರಿಸಲಿಲ್ಲ. ಸುಮ್ಮನೆ ಮುಗುಳ್ನಕ್ಕರು.

ಅಮರರವರು ಧ್ಯಾನವನ್ನು, ಉನ್ನತವಾದ ತಂತ್ರಗಳನ್ನು ಕಲಿಸಿದರು ಮತ್ತು ಋಷಿಗಳಿಂದ ಪಡೆದ ಜ್ಞಾನವನ್ನು ಹೇಳಿಕೊಡುತ್ತಿದ್ದರು. ಪ್ರಶ್ನೆಗಳನ್ನು ಮತ್ತು ಆತಂಕಗಳನ್ನು ನಮ್ಮಲ್ಲಿ ಹೊತ್ತು ಪ್ರಶಾಂತವಾದ ಸಂಜೆಯ ಸಮಯಗಳಲ್ಲಿ ಅವರ ಸುತ್ತಲೂ ಸೇರುತ್ತಿದ್ದೆವು. ಮೃದುವಾದ ಗಂಭೀರ ಧ್ವನಿಯಲ್ಲಿ ಅವರು ಅಮೂಲ್ಯವಾದ ಜ್ಞಾನವನ್ನು ಹರಿಸುತ್ತಿದ್ದರು. ಕೆಲವರು ಮಾತ್ರವೇ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಿದ್ದರು. ಅವರು ಅದಕ್ಕಾಗಿ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅವರು ನಿಷ್ಠಾವಂತರಿಗೂ ಮತ್ತು ಕೇವಲ ಕುತೂಹಲದಿಂದ ಬಂದವರಿಗೂ ಒಂದೇ ರೀತಿಯಲ್ಲಿ ಸೂರ್ಯನಂತೆ ಪ್ರಕಾಶ ಬೀರುತ್ತಿದ್ದರು.

ಹಿರಿಯರೊಬ್ಬರು ಅಸ್ವಸ್ಥರಾದರು. ಅವರು ಕ್ಯಾನ್ಸರ್ ಪೀಡಿತರಾಗಿದ್ದಾರೆಂಬ ಸುದ್ದಿ ಕೇಳಿ ಆಘಾತವಾಯಿತು. ಶಸ್ತ್ರಚಿಕಿತ್ಸೆಗೆಂದು ಅವರನ್ನು ಅಮೆರಿಕಾಗೆ ಕರೆದುಕೊಂಡು ಹೋಗಲಾಯಿತು. ಶಸ್ತ್ರಚಿಕಿತ್ಸೆ ಮಾಡುವ ಸಮಯದಲ್ಲಿ ನಾನು ಅಮರರವರ ಜೊತೆಯಲ್ಲಿದ್ದೆ. ಗಂಭೀರ ವದನರಾಗಿ ಅಮರರವರು ಕೊಠಡಿಯಲ್ಲಿ ಅತ್ತಿಂದಿತ್ತ ಹೆಜ್ಜೆ ಹಾಕುತ್ತಿದ್ದರು. ಅವರು ಆ ರೀತಿ ಇರುತ್ತಿರಲಿಲ್ಲ. ನಮಗೆ ಗೊಂದಲವುಂಟಾಯಿತು. ನಮ್ಮ ಗೊಂದಲವನ್ನು ಅರಿತ ಅವರು ಉತ್ತರಿಸಿದರು.

"ಶಸ್ತ್ರಚಿಕಿತ್ಸೆ ಮುಗಿಯಿತು. ಅವರಿಗೆ ಇನ್ನೂ ಪ್ರಜ್ಞೆ ಬರಬೇಕು."

ನಾವು ಆಸ್ಪತ್ರೆಯ ಚಿತ್ರವನ್ನು ನಮ್ಮ ಮುಂದೆ ತಂದುಕೊಳ್ಳುತ್ತಾ ಕಾದೆವು. ಸ್ವಲ್ಪ ಸಮಯದ ನಂತರ ನಗೆ ಬೀರುತ್ತಾ ಅವರು ಕುಳಿತುಕೊಂಡರು.

"ಈಗ ಅವರು ಹುಶಾರಾಗಿದ್ದಾರೆ. ಅವರು ಎಚ್ಚರಗೊಂಡಿದ್ದಾರೆ."

(ಮುಂದುವರೆಯುವುದು)

## ಪ್ರಶ್ನೋತ್ತರಗಳು

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ಜ್ಯೋತಿಷ್ಯದ ಭವಿಷ್ಯ ವಾಣಿಗಳು ತಪ್ಪಾಗುತ್ತಿವೆ. ಇದಕ್ಕೆ ಕಾರಣ ಕಾಲ ವೇಗವಾಗಿ ಚಲಿಸುತ್ತಿರುವುದೇ?**

ಉ: ಇಲ್ಲ. ಒಬ್ಬ ನಿಜವಾದ ಜ್ಯೋತಿಷಿ ಸರಿಯಾದ ರೀತಿಯಲ್ಲಿ ಭವಿಷ್ಯ ನುಡಿಯುತ್ತಾನೆ. ಕೆಲವೊಮ್ಮೆ ಅವು ತಪ್ಪಾಗುತ್ತವೆ. ಆ ಸಮಯಗಳಲ್ಲಿ ಬೇರೆ ಅಂಶಗಳಿರುತ್ತವೆ. ಕುಂಡಲಿಯು (planetary chart), ನಾವು ಹಿಂದಿನ ಜನ್ಮಗಳ ಕರ್ಮಗಳ ಪರಿಣಾಮಗಳನ್ನು ಹಾದು ಹೋಗುತ್ತಿದ್ದೇವೆ ಅಥವ ಕಷ್ಟ ಪಡುತ್ತಿದ್ದೇವೆ ಎನ್ನುವುದನ್ನು ಸೂಚಿಸುತ್ತದೆ. ಆದರೆ ನಾವು ಧ್ಯಾನ ಮಾಡುವುದಕ್ಕೆ ಪ್ರಾರಂಭಿಸಿದಾಗ ಬೇರೊಂದು ಪಥಕ್ಕೆ ಬದಲಾಗುತ್ತೇವೆ, ಇದನ್ನು ನೋಡುವುದಕ್ಕೆ ಜ್ಯೋತಿಷಿಗಳಿಗೆ ಸಾಧ್ಯವಾಗುವುದಿಲ್ಲ, ಕಾರಣ ಅವರು ಹುಟ್ಟಿದ ಸಮಯದ ಕುಂಡಲಿಯ ಪ್ರಕಾರ ಲೆಕ್ಕ ಮಾಡುತ್ತಾರೆ. ಆದ್ದರಿಂದ ಅದು ಕಾಲದ ವೇಗಕ್ಕೆ ಸಂಬಂಧಿಸಿಲ್ಲ.

**ಪ್ರ: ಒಮ್ಮೆ ನಾವು ಬೆಳಕನ್ನು ಚಾನಲ್ ಮಾಡಿದರೆ, ನಾವು ಪ್ರಜ್ಞಾ ಪೂರ್ವಕವಾಗಿ ಚಾನಲ್ ಮಾಡದಿದ್ದರೂ, ಬೆಳಕು ತನ್ನಿಂದ ತಾನೇ ಹರಡುತ್ತಿರುತ್ತದೆಯೇ?**

ಉ: ಇಲ್ಲ ಚಾನಲಿಂಗ್‌ಗೆ ನಾವು ಪ್ರಜ್ಞಾ ಪೂರ್ವಕವಾಗಿ ಭಾಗವಹಿಸಬೇಕು. ನೀವು ಬೆಳಕನ್ನು, 'ನೀನೇ ಚಾನಲ್ ಮಾಡು, ನಾನು ಬೇರೆ ಕೆಲಸದಲ್ಲಿ ನಿರತನಾಗಿರುತ್ತೇನೆ,' ಎಂದು ಹೇಳಲಾಗುವುದಿಲ್ಲ. ಅದು ಆ ರೀತಿ ನಡೆಯುವುದಿಲ್ಲ.

**ಪ್ರ: ಹೊಸ ಬೆಳವಣಿಗೆಗೆ ವಿಸರ್ಜನೆ (dissolution) ಅವಶ್ಯವೇ?**

ಉ: ಬಹುಶಃ ತಾರ್ಕಿಕವಾಗಿ ಹಾಗೆ ಹೇಳುತ್ತಾರೆ, ಆದರೆ ಬೆಳವಣಿಗೆಗೆ ವಿಸರ್ಜನೆ ಅಥವಾ ವಿನಾಶ ಬೇಕಾಗಿಲ್ಲ.

**ಪ್ರ: ನಾವು ವರ್ತಮಾನದಲ್ಲಿದ್ದುಕೊಂಡೇ ಭವಿಷ್ಯದ ಬಗ್ಗೆ ಹೇಗೆ ಕನಸು ಕಾಣಬಹುದು?**

ಉ: ನಾವು ಕನಸು ಕಾಣುವಾಗ ವರ್ತಮಾನ, ಭೂತ ಅಥವ ಭವಿಷ್ಯಗಳಾವುವೂ ಇಲ್ಲದಂಥ ಕಾಲದ ವಲಯವನ್ನು ಪ್ರವೇಶಿಸುತ್ತೇವೆ. ಬಹುಶಃ ಅಲ್ಲಿ ಒಂದಕ್ಕೂ ಹೆಚ್ಚು ಹಂತಗಳ ಮಿಶ್ರಣವಿರಬಹುದು. ಆದಕಾರಣ ನಾವು ವರ್ತಮಾನದಲ್ಲಿದ್ದು ಭವಿಷ್ಯದ ಬಗ್ಗೆ ಕನಸು ಕಾಣುತ್ತೇವೆಂದು ಹೇಳಲಾಗುವುದಿಲ್ಲ. ತಾಂತ್ರಿಕವಾಗಿ ಕೂಡ ಇದು ಸಾಧ್ಯವಿಲ್ಲ.

**ಪ್ರ: ಇತ್ತೀಚಿನ ಎರಡು ಗ್ರಹಣಗಳಿಂದಾದ ಪರಿಣಾಮಗಳೇನು?**

ಉ: ಪ್ರಮುಖವಾದ ಅಂಶವೇನೆಂದರೆ ಪ್ರಜ್ಞಾ ಮಟ್ಟದಲ್ಲಿ ಸ್ಥಿತ್ಯಂತರವಾಗಿರುವುದು. ಜನರಿಗೆ ಈ ಸ್ಥಿತ್ಯಂತರಗಳ ಜೊತೆಗೆ ಹೊಂದಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ, ಕಾರಣ ಈ ಸ್ಥಿತ್ಯಂತರಗಳು ನಮ್ಮನ್ನು ಉನ್ನತ ಮಟ್ಟದ ಅಸ್ತಿತ್ವಕ್ಕೆ ಕರೆದುಕೊಂಡು ಹೋಗುತ್ತವೆ, ಆದರೆ ನಾವು ಕೆಳಗಿನ ಮಟ್ಟಗಳಿಗೆ ಜೋತು ಬಿದ್ದಿದ್ದು, ಇವು ಘರ್ಷಣೆಗಳಿಗೆ ಕಾರಣಗಳಾಗುತ್ತವೆ. ಇಂತಹ ಸಮಯಗಳಲ್ಲಿ ಹೋರಾಡುವಾಗ ನಮಗೆ ಋಷಿಗಳಿಂದ ಬೆಂಬಲ ಸಿಗುತ್ತದೆ. ಈ ಗ್ರಹಣಗಳು, ನಾವು ಸತ್ಯ ಯುಗವನ್ನು ಆಯ್ಕೆ ಮಾಡಿಕೊಂಡು ಅದರೊಳಗೆ ಹೋಗಲು ಹೊಸ ಅವಕಾಶಗಳನ್ನು ತೆರೆಯುತ್ತವೆ. ಮತ್ತು ಖಂಡಿತವಾಗಿಯೂ ಹೊಸ ಚೈತನ್ಯಗಳನ್ನು ಪಡೆಯುತ್ತೇವೆ. ಈ ಗ್ರಹಣಗಳು, ವ್ಯಕ್ತಿಯ ಮಟ್ಟದಿಂದ ಪ್ರಾರಂಭವಾಗಿ ಪ್ರಪಂಚದಾದ್ಯಂತ ಸಕಾರಾತ್ಮಕ ಶಕ್ತಿಗಳನ್ನು ಬಲಗೊಳಿಸುತ್ತವೆ. ಹೆಚ್ಚು ಜಾಗೃತಿ ಸಂಭವಿಸಿ ನಮ್ಮ ಜೀವನಗಳು ಬದಲಾಯಿಸುತ್ತವೆ, ಏಕೆಂದರೆ ವೈಯಕ್ತಿಕವಾಗಿ ನಾವು ನಕಾರಾತ್ಮಕತೆಗಳನ್ನು ತಿರಸ್ಕರಿಸುತ್ತೇವೆ. ಅವರು ಪ್ರತಿಯೊಂದು ಮಟ್ಟದಲ್ಲಿಯೂ ಶುದ್ಧತೆಗಾಗಿ ಹಂಬಲಿಸುತ್ತಾರೆ. ಈಗಾಗಲೇ ಜಾಗೃತಗೊಂಡ ಜನರಲ್ಲಿ ಮತ್ತಷ್ಟು ಜಾಗೃತಿ ಉಂಟಾಗುತ್ತದೆ. ಅವರು ಇನ್ನೂ ಉನ್ನತ ಮಟ್ಟದ ವಿಷಯಗಳನ್ನು ಸ್ಪಷ್ಟವಾಗಿ ಅರಿಯುತ್ತಾರೆ. ಧ್ಯಾನಿಗಳು ಹೆಚ್ಚುತ್ತಾರೆ. ಪ್ರಕಟಗೊಳ್ಳುವಿಕೆಯು ಎಲ್ಲ ಹಂತದಲ್ಲೂ ಹೆಚ್ಚಾಗುತ್ತದೆ. ನಾವು ಸಕಾರಾತ್ಮಕರಾಗುವ ಮೂಲಕ ನಮ್ಮ ನಕಾರಾತ್ಮಕತೆಗಳನ್ನು ನಿಭಾಯಿಸುತ್ತೇವೆ. ಬೇರೆ ವ್ಯಕ್ತಿಗಳಲ್ಲಿನ ಸಕಾರಾತ್ಮಕ ಭಾಗಗಳೊಂದಿಗೆ ಸಂಪರ್ಕ ಹೊಂದುತ್ತೇವೆ. ಕೆಲವು ಗಂಭೀರ ಕರ್ಮಗಳನ್ನು ಕಳೆಯುವುದಕ್ಕೆ ಬಹಳ ಸಮಯ ಬೇಕಾಗುತ್ತದೆ, ಇಂತಹ ಕರ್ಮಗಳ ನಿವಾರಣೆಗೆ ಈ ಚೈತನ್ಯಗಳು ಸಹಾಯ ಮಾಡುತ್ತವೆ.

**ಪ್ರ: ನಾವು ಹೊಸ ಯುಗದೊಳಕ್ಕೆ ಮುಂದುವರಿಯುತ್ತಿದ್ದಂತೆ ಹೊಸ ರೋಗಗಳು ಹೆಚ್ಚಾಗುತ್ತವೆಯೇ?**

ಉ: ಬಹುಶಃ ಹೌದು. ನಮಗೆ ಗೊತ್ತಿಲ್ಲ. ಹೆಚ್ಚು ಹೀಲರ್‌ಗಳಿದ್ದಾರೆ ಮತ್ತು ಈ ಹೀಲರ್‌ಗಳ ಮೂಲಕ ಹೊಸ ಹೀಲಿಂಗ್ ಚೈತನ್ಯಗಳು ದಕ್ಷತೆಯಿಂದ ಕೆಲಸ ಮಾಡುತ್ತವೆ. ಆದಕಾರಣ ನಾವು ಹೊಸ ರೋಗಗಳ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ.

**ಪ್ರ: ವಿವಾಹ ವಿಚ್ಛೇದನಗಳು ಹೆಚ್ಚಾಗಿರುತ್ತವೆಯೇ?**

ಉ: ನನಗೆ ಹಾಗೆ ಅನಿಸುತ್ತಿಲ್ಲ. ನಾವು ಮುಂದುವರಿಯುತ್ತಾ ಹೋದಂತೆ ಹೆಚ್ಚು ವಿವೇಕದಿಂದ ಬದುಕಲು ಪ್ರಾರಂಭಿಸುತ್ತೇವೆ. ಬೇರೆಯವರ ಜೊತೆಗೆ ಹೊಂದಿಕೊಂಡು ಹೋಗಲು ಪ್ರಾರಂಭಿಸುತ್ತೇವೆ.


**ಪ್ರ: ನಾಸ್ತಿಕರು ಹೆಚ್ಚಾಗಿರುತ್ತಾರೆಯೇ?**

ಉ: ಇಲ್ಲ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನ ದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಜುಲೈ 15ರಂದು ಅಡುಗೆ ಮನೆಯನ್ನು ಶುಚಿಮಾಡುತ್ತಿದ್ದಾಗ ನಾನು ಕಾಲುಜಾರಿ ಬಿದ್ದೆ. ಕಾಲುಗಳಿಗೆ ಮತ್ತು ಭುಜಗಳಿಗೆ ನೋವಾಯಿತು. ಹಣೆ ಬಾಗಿಲಿಗೆ ಬಡಿಯಿತು. ಹೇಗೋ ಕಷ್ಟಪಟ್ಟು ಕುಳಿತು ಬೆಳಕನ್ನು ತೆಗೆದುಕೊಳ್ಳಲು ಪ್ರಾರಂಭಿಸಿದೆ. ಕೆಲವೇ ಕ್ಷಣಗಳಲ್ಲಿ ಚಮತ್ಕಾರ ನಡೆದು ನೋವು ನಿವಾರಣೆಯಾಯಿತು. ಸುಲಭವಾಗಿ ಎದ್ದು ನಿಂತು ನನ್ನ ಕೆಲಸಗಳನ್ನು ಮತ್ತೆ ಮುಂದುವರೆಸಿದೆ. ಗುರೂಜಿಯವರಿಗೆ ವಂದಿಸಿದೆ. ಅವರು ನಮಗೆ ಬೆಳಕಿನ ಬಗ್ಗೆ ಯಾವಾಗಲೂ ಅರಿವಿರುವಂತೆ ಸಹಾಯ ಮಾಡುತ್ತಿದ್ದಾರೆ.

–ವಿ. ಸುಜಾತ

ಈಗ ನಾನು ಗಮನವಿಟ್ಟು ಕೆಲಸ ಮಾಡುತ್ತೇನೆ, ನನ್ನ ಏಕಾಗ್ರತೆ ಉತ್ತಮಗೊಂಡಿದೆ. ಧ್ಯಾನ ಈಗ ಆಳವಾಗಿದ್ದು ಅದನ್ನು ಆನಂದದಿಂದ ಮಾಡುತ್ತೇನೆ. ಪೂರ್ಣ ಮೌನವನ್ನು ಆನಂದಿಸುತ್ತೇನೆ. ಧ್ಯಾನವು ಈಗ ನನ್ನ ಜೀವನದ ಒಂದು ಭಾಗವಾಗಿದೆ. ಪ್ರತಿನಿತ್ಯದ ತೊಂದರೆಗಳೆಲ್ಲ ನಿವಾರಣೆಯಾಗುತ್ತಿವೆ. ಅತ್ಯಂತ ಹರ್ಷಿತಳಾಗಿ ಬೆಳಕನ್ನು ಯಾವಾಗಲೂ ನನ್ನೊಂದಿಗೆ ಕೊಂಡೊಯ್ಯುತ್ತೇನೆ. ಬೆಳಕಿನ ಮೇಲಿನ ವಿಶ್ವಾಸ, ನಂಬಿಕೆ ಹಾಗೂ ಭರವಸೆ ಹೆಚ್ಚು ಹೆಚ್ಚು ಬೆಳೆಯುತ್ತಿದೆ. ಬರುವ ಎಲ್ಲಾ ಅಡೆತಡೆಗಳು ಹಾಗು ತೊಂದರೆಗಳಿಂದ ದೂರವಿರಲು ಸಾಧ್ಯವಾಗಿದೆ.

–ರೆಬೋನಿ ರೇ

ನನ್ನ ಅಂತರಂಗದ ಅರಿವು ಹೆಚ್ಚು ಚುರುಕಾಗುತ್ತಿದೆ. ಅನೇಕ ಚಮತ್ಕಾರಗಳು ನಡೆಯುತ್ತಿವೆ. ನಾನು ಏನನ್ನೂ ಕೇಳದಿದ್ದರೂ ಎಲ್ಲವನ್ನೂ ವಿಶ್ವವೇ ನೋಡಿಕೊಳ್ಳುತ್ತಿದೆ. ನಮ್ಮ ಆಸ್ತಿ ಜಗಳ ಕೊನೆಗೊಂಡಿದೆ. ನಮ್ಮ ರಸ್ತೆಯಲ್ಲಿನ ಕಸದ ಗುಡ್ಡೆಯನ್ನು ತೆಗೆಯಲಾಗಿದೆ, ಆ ಕಸವು ನಮ್ಮೆಲ್ಲರ ತಲೆನೋವಾಗಿತ್ತು. ಬೆಳಕಿಗೆ ಎಲ್ಲವೂ ತಿಳಿದಿದೆ.

–ದೀಪಾ

ಹಂತ ಹಂತವಾಗಿ ಕೆಲವು ಸಕಾರಾತ್ಮಕ ಬದಲಾವಣೆಗಳಾಗುತ್ತಿರುವಂತೆ ಕಂಡುಬರುತ್ತಿದೆ. ಈಗ ನನಗೆ ಮುಕ್ತ ಮನೋಭಾವ ಮತ್ತು ವಿಶಾಲ ದೃಷ್ಟಿಕೋನದ ಪ್ರಾಮುಖ್ಯತೆಯ ಅರಿವುಂಟಾಗುತ್ತಿದೆ.

–ನಿರ್ಮಲ. ಜೆ

ಈಗ ನಾನು ಪ್ರಶಾಂತಳಾಗಿದ್ದೇನೆ. ನಾನು ಬೆಳಕಿಗೆ ಸಂಪೂರ್ಣ ಶರಣಾಗಿರುವುದರಿಂದ ಎಂತಹ ಸಂದರ್ಭವನ್ನಾದರೂ ಒಪ್ಪಿಕೊಳ್ಳಲು ಸುಲಭವಾಗಿದೆ. ಆಘಾತದ ಜೊತೆ ಜೊತೆಗೆ ರಕ್ಷಣೆಯೂ ಇರುತ್ತದೆ!

–ನಂದಿತ ಪಟೇಲ್

ನನಗೆ ನನ್ನ ಮೇಲಿನ ನಿಯಂತ್ರಣ ಹೆಚ್ಚಾಗಿದೆ, ಈಗ ಮರುದಿನದ ಯೋಜನೆಗಳನ್ನು ಚೆನ್ನಾಗಿ ರೂಪಿಸಿಕೊಳ್ಳಬಲ್ಲೆ. ನನಗೆ ಪ್ರಾಪಂಚಿಕ ವಸ್ತುಗಳಲ್ಲಿ ತೃಪ್ತಿ ಸಿಕ್ಕಿದೆ. ನನ್ನ ಅಂತರ್ದೃಷ್ಟಿ ಸುಧಾರಿಸಿದೆ.

–ಶಾಂತಾ ಅಂಬಾಡಿ

ವರ್ಷದ ಮೊದಲಿಂದಲೇ ಚೈತನ್ಯಗಳಲ್ಲಿ ಆಗುತ್ತಿರುವ ವ್ಯತ್ಯಾಸದ ಅನುಭವವಾಗುತ್ತಿದೆ. ನನ್ನ ಜೀವನದ ಗುರಿ ತಿಳಿದ ನಂತರ ಅತ್ಯಂತ ಶಾಂತ ಚಿತ್ತಳಾಗಿದ್ದೇನೆ. ನನ್ನ ಗುರಿ ಸಾಧಿಸಲು ಸಹಾಯ ಮಾಡುವಂತೆ ಗುರೂಜಿಯವರನ್ನು ಪ್ರಾರ್ಥಿಸುತ್ತೇನೆ. ಗುರಿ ಮುಟ್ಟಲು ನನ್ನ ಪ್ರಯತ್ನ ಸಾಲದಾಗಿರುವುದರಿಂದ ಇನ್ನೂ ಹೆಚ್ಚಿನ ಪ್ರಯತ್ನ ಮಾಡುತ್ತೇನೆ. ನಿಮ್ಮ ಸಹಾನುಭೂತಿ ಹಾಗೂ ತಾಳ್ಮೆಗೆ ವಂದನೆಗಳು.

ಪರಿಹಾರಗಳನ್ನು ಕಂಡುಕೊಳ್ಳಲು ಬಿಡದೆ ಪ್ರಯತ್ನಿಸುತ್ತಿದ್ದೇನೆ. ಯಾವುದೇ ಒಂದು ಆಧ್ಯಾತ್ಮಿಕ ಪುಸ್ತಕವನ್ನು ಓದಿದಾಗ ಅದರೊಳಗಿರುವ ಚೈತನ್ಯಕ್ಕೆ ಸುಲಭವಾಗಿ ಸಂಪರ್ಕ ಏರ್ಪಡುತ್ತದೆ. ಪುಸ್ತಕದ ಕೆಲವು ಭಾಗಗಳಲ್ಲಿ ಗುರೂಜಿಯವರು ಕಂಡು ಬರುತ್ತಾರೆ ಇಲ್ಲವೇ ಅವರ ಧ್ವನಿ ಕೇಳುತ್ತದೆ. ಅತಿಸೂಕ್ಷ್ಮವಾಗಿ ಆ ಚೈತನ್ಯಗಳಿಗೆ ನಾನು ಸ್ಪಂದಿಸುತ್ತೇನೆ.

–ನಂದಿತಾ ವಿಜಯನ್

ಯಾವಾಗಲಾದರೂ ನನಗೆ ದಿನನಿತ್ಯದ ತೊಂದರೆಗಳಿಂದ ಚಿಂತೆಯಾದರೆ ಬೆಳಕಿನೊಂದಿಗೆ ಮಾತನಾಡಿ ಪರಿಹರಿಸಿಕೊಳ್ಳುತ್ತೇನೆ. ಪ್ರತಿ ಸಂದರ್ಭದಲ್ಲೂ ಬೆಳಕು ಸಹಾಯಮಾಡುತ್ತಿದೆ.

–ಪಲ್ಲವಿ ದೇಸಾಯ್

ಪ್ರತಿ ಬಾರಿ 'ಡೋರ್‌ವೇಸ್' ಪತ್ರಿಕೆಯನ್ನು ಓದಿದಾಗಲೂ, ನಾನು ನಿಜವಾಗಿಯೂ ಕೇಂದ್ರೀಕರಿಸಬೇಕಾಗಿರುವ ವಿಷಯಗಳಾದ ಸಕಾರಾತ್ಮಕತೆ, ವರ್ತಮಾನದಲ್ಲಿರುವುದು ಮತ್ತು ಬೆಳಕನ್ನು ಹೊಂದಿರಬೇಕು ಎಂಬ ವಿಷಯಗಳ ಬಗ್ಗೆ ಅದು ನೆನಪಿಸುತ್ತದೆ. ವರ್ತಮಾನಕ್ಕೆ ಮನಸ್ಸನ್ನು ತರುವ ಪ್ರಯತ್ನ ಮಾಡಿದಾಗ ಅದು ನನಗೆ ಶಾಂತತೆಯನ್ನು ಕೊಡುತ್ತದೆ. ನನ್ನ ಧ್ಯಾನ ಹೆಚ್ಚು ಅರ್ಥಪೂರ್ಣವಾಗಿದೆ. ನಾನು ಸಾಧನೆಗೆ ಸಂಪೂರ್ಣ ಸಮರ್ಪಿಸಿಕೊಂಡಾಗ ಮಾತ್ರ ಆಧ್ಯಾತ್ಮಿಕ ಬೆಳವಣಿಗೆ ಸಾಧ್ಯ ಎಂಬುದನ್ನು ಆಗಾಗ ನೆನಪಿಸಿ ಕೊಳ್ಳುತ್ತಿರುತ್ತೇನೆ.

–ಶ್ರಿಯ ಶಶಾಂಕ್

ಈಗ ನಾನು ಸಂಪೂರ್ಣವಾಗಿ ಆತಂಕ ರಹಿತಳಾಗಿದ್ದೇನೆ. ನಿಶ್ಚಲತೆ ಹಾಗೂ ಶೂನ್ಯತೆಯ ಅನುಭವವಾಗುತ್ತಿದೆ. ಎಲ್ಲವೂ ಮಹಾ ಶೂನ್ಯತೆಯಲ್ಲಿ ಕರಗುತ್ತಿರುವಂತೆನಿಸುತ್ತಿದೆ.

–ಸಂಗಿತಾ ಪತಿ

ಅನೇಕ ಬಾರಿ ಧ್ಯಾನದಲ್ಲಿ ಬೆಳಕಿನ ಕಿರಣಗಳು, ಮೋಡಗಳು ಮತ್ತು ವಿಶಾಲವಾದ ಆಕಾಶ ಕಂಡು ಬರುತ್ತದೆ. ಒಂದು ದಿನ ನಾನು ನನ್ನನ್ನೇ ನೀಲಾಕಾಶದ ಮೇಲೆ ಕಂಡೆ ಮತ್ತು ಆಕಾಶದ ಹಿಂದಿನಿಂದ ಪ್ರಕಾಶಮಾನವಾದ ಬಿಳಿಯ ಬೆಳಕು ತೂರಿಬರಲು ಪ್ರಯತ್ನಿಸುತ್ತಿತ್ತು.

– ವಿದ್ಯಾ ಜೆ. ಹೆಚ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ